ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 6
ಪುಟ : 12
ಬೆಲೆ : ₹ 5/-




"ನಿಮ್ಮ ಅದೃಷ್ಟಕ್ಕೆ ನೀವೇ ಹೊಣೆ ಎಂದು ತಿಳಿದುಕೊಳ್ಳಿ ನಿಮಗೆ ಬೇಕಾದ ಶಕ್ತಿ ಸಹಾಯವೆಲ್ಲ ನಿಮ್ಮಲ್ಲೇ ಇದೆ."

– ಸ್ವಾಮಿ ವಿವೇಕಾನಂದ

# ಸಂಪಾದಕೀಯ...

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆಯನ್ನು ವಿನೂತನವಾಗಿ ಪ್ರಾರಂಭಿಸಿವೆ. 'ಸಮರ್ಥಭಾರತ' ಎಂಬ ಹೆಸರಿನಲ್ಲಿ ನಾಡಿನ ಮಕ್ಕಳಿಗೆ ಒಂದು ಪರೀಕ್ಷೆ ಮಾಡಿತು. ವಿವೇಕಾನಂದರ ಜೀವನ ಮತ್ತು ಆದರ್ಶಗಳನ್ನು ತಿಳಿಸಬೇಕೆಂದು 'ವಿವೇಕಯಾತ್ರೆ' ಎಂಬ ಪುಸ್ತಕವನ್ನು ಮುದ್ರಿಸಿ, ಅದನ್ನು ವಿದ್ಯಾರ್ಥಿಗಳು ಓದಿ, ತಿಳಿದು ತಾವು ಅರಿತವಿಚಾರವನ್ನು ಉತ್ತರ ರೂಪದಲ್ಲಿ ವ್ಯಕ್ತಗೊಳಿಸಿದ್ದಾರೆ. ಪ್ರಾರಂಭದಲ್ಲಿ, ಪ್ರಾಯೋಗಿಕವಾಗಿ ಹತ್ತು ಸಾವಿರ ಮಕ್ಕಳಿಗೆ ಈ ಪರೀಕ್ಷೆಯನ್ನು ಶನಿವಾರ ಫೆಬ್ರವರಿ 2, ವಿವೇಕಾನಂದರ ಹುಟ್ಟುಹಬ್ಬದ ಸಂದರ್ಭದಲ್ಲಿ ನಡೆಸಲಾಗಿದೆ. ಅನೇಕ ಮಕ್ಕಳ ಉತ್ತರ ಪತ್ರಿಕೆಯನ್ನು ನೋಡಿದಾಗ, ಮಕ್ಕಳ ಮನಸ್ಸಿನ ಮೇಲೆ, ಸ್ವಾಮೀಜಿಯವರ ಬದುಕು, ಆಳವಾದ ಪ್ರಭಾವವನ್ನು ಬೀರಿದೆ ಎಂಬುದು ವ್ಯಕ್ತವಾಗುತ್ತದೆ.

ಮಾರ್ಚ್-ಏಪ್ರಿಲ್ ಪರೀಕ್ಷಾ ಮಾಸಗಳು. ಈಗಾಗಲೇ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ನಾಲ್ಕೈದು ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಶಾಲೆಗಳಲ್ಲಿ ನಡೆಸಲಾಗಿದೆ. ಡಿಸೆಂಬರ್ ಅಂತ್ಯಕ್ಕೇ ನಿಯಮಿತ ಪಾಠಪ್ರವಚನಗಳು ಮುಗಿದು, ಪರೀಕ್ಷಾ ತಯಾರಿ ಪ್ರಾರಂಭವಾಗುತ್ತದೆ. ಈ ಪ್ರಕ್ರಿಯೆಗೆ ಇಲಾಖಾಧಿಕಾರಿಗಳೂ ಕುಮ್ಮಕ್ಕು ಕೊಡುತ್ತಾರೆ. ಎಲ್ಲ ಶಾಲೆಗಳ ಶಿಕ್ಷಕರೂ ನಮಗೆ ಪರೀಕ್ಷಾ ಫಲಿತಾಂಶವೇ ಮುಖ್ಯ ಎಂಬವಾದ ಮಂಡಿಸುತ್ತಾರೆ. ಒಂದು ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ಅದರ ವಾರ್ಷಿಕ ಫಲಿತಾಂಶದ ಮೇಲೆಯೇ ಅಳೆಯುವ ಪ್ರವೃತ್ತಿಯೂ ಬೆಳೆಯುತ್ತಿದೆ. ಪೋಷಕರೂ ಇಂಥ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಲು ಮುಗಿಬೀಳುತ್ತಾರೆ. ಈ ಸಂಗತಿ ವಿಷಯ ಗ್ರಹಣ ಮತ್ತು ಮನನಕ್ಕೆ ಪೂರಕವೇ? ಮನಶಾಸ್ತ್ರೀಯ ಸಮ್ಮತವೇ? ಶೈಕ್ಷಣಿಕವಾಗಿ ಸರಿಯೇ? ಎಂಬ ಹಲವು ಪ್ರಶ್ನೆಗಳು, ಶಿಕ್ಷಣ ಕ್ಷೇತ್ರದಲ್ಲಿ ಚರ್ಚೆಯಾಗಬೇಕಿರುವುದು, ಇಂದಿನ ನಿಜಾಂಶ ಅವಶ್ಯಕತೆ. ಈ ವಿಷಯದ ಬಗ್ಗೆ ಪರ-ವಿರೋಧ ನಿಲುವುಗಳನ್ನು ಶಿಕ್ಷಕ ಸಮಾಚಾರವು ಸ್ವಾಗತಿಸುತ್ತದೆ. ಈ ಬಗ್ಗೆ ನಿಮ್ಮ ಅನಿಸಿಕೆಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

ಇತ್ತೀಚೆಗೆ ನಮ್ಮ ದೇಶದಲ್ಲಿ ನಡೆದ ಎರಡು ಘಟನೆಗಳು, ಶಿಕ್ಷಕರಾದ ನಮ್ಮನ್ನು ಚಿಂತನೆಗೆ ಹಚ್ಚಬೇಕಿದೆ. ಮೊದಲನೆಯದು ನಟ ಕಮಲಹಾಸನ್‌ರವರ 'ವಿಶ್ವರೂಪಂ' ಚಲನಚಿತ್ರದ ವಿರುದ್ಧ ಪ್ರಕಟವಾದ ಆಕ್ರೋಶ. ಎರಡನೆಯದು ದೇಶದ್ರೋಹಿ ಅಫ್ಜಲ್ ಗುರುವಿನ ನೇಣಿಗೆ ಬಂದ ಪ್ರತಿಕ್ರಿಯೆ. ನಾವು ಪ್ರಜಾಪ್ರಭುತ್ವದ ಆಡಳಿತದಲ್ಲಿ ಇರುವೆವೋ ಅಥವಾ ಸರ್ವಾಧಿಕಾರಿ ಪ್ರಭುತ್ವದ ಆಡಳಿತವೋ ಎಂಬ ಪ್ರಶ್ನೆ ಹುಟ್ಟುಹಾಕುತ್ತದೆ. ಪ್ರಜಾಪ್ರಭುತ್ವದಲ್ಲಿ ಭಿನ್ನಮತಗಳು ಅತ್ಯಂತ ಸಹಜ. ಹೀಗಾಗಿ ಕಮಲಹಾಸನ್‌ರಿಗೆ ತಮ್ಮ ವಿಚಾರವನ್ನು ಕಲಾಮಾಧ್ಯಮದ ಮೂಲಕ ಮಂಡಿಸುವ ಹಕ್ಕಿದೆ. ಆದರೆ ಆ ಚಿತ್ರವನ್ನು ನೋಡುವ-ನೋಡದಿರುವ ಹಕ್ಕೂ ಮಿಕ್ಕವರಿಗಿದೆ. ಅದರ ಬದಲಿ ದಂಗೆ ಎದ್ದು ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ಹಾಳುಗೆಡುವುವವರ ಪ್ರವೃತ್ತಿ ಸರ್ವಥಾ ಖಂಡನೀಯ. ಹಾಗೆಯೇ ಓರ್ವ ದೇಶದ್ರೋಹಿಯ ಶಿಕ್ಷೆಯನ್ನು ಸ್ವಾಗತಿಸಬೇಕಲ್ಲದೆ, ಅದರ ಬಗ್ಗೆ ಬೇಕು ಬೇಡವೆಂದು ಚರ್ಚಿಸುವುದು, ತಪ್ಪು-ಒಪ್ಪುಗಳನ್ನು ಲೆಕ್ಕ ಹಾಕುವುದು ದೇಶದ ಹಿತಕ್ಕೆ ಮಾರಕವಲ್ಲವೇ? ನಮ್ಮ ಈ ಬಗೆಯ ಮಾನಸಿಕತೆಗೆ ನಮ್ಮ ಇಂದಿನ ಶಿಕ್ಷಣ ಕ್ರಮವೂ ಕಾರಣವಿರಬಹುದೇ? ಈ ಬಗ್ಗೆಯೂ ನಮ್ಮಲ್ಲಿ ಚರ್ಚೆಯಾಗುವುದು ತೀರ ಉಚಿತ.

- ಸಂಪಾದಕರು

## ವಿವೇಕ ವಾಣಿ




ಸ್ವೀಕರಿಸುವ ಮನಸ್ಸಿದ್ದರೆ ಸದ್ಗುಣಗಳನ್ನು ಸ್ವೀಕರಿಸು, ಈಜುವ ಮನಸ್ಸಿದ್ದರೆ ಜ್ಞಾನಸಾಗರದಲ್ಲಿ ಈಜು, ನಡೆಯುವ ಮನಸ್ಸಿದ್ದರೆ ಸನ್ಮಾರ್ಗದಲ್ಲಿ ನಡೆ, ಮಾತನಾಡುವುದಿದ್ದರೆ ಸತ್ಯವನ್ನೇ ಮಾತನಾಡು, ಹಾಡುವುದಿದ್ದರೆ ಅನುಭವದ ಮಾತುಗಳನ್ನೇ ಹಾಡು, ಕೇಳುವುದಿದ್ದರೆ ಸದುಪದೇಶಗಳನ್ನು ಕೇಳು, ದೊರಕಿಸುವುದಿದ್ದರೆ ಜಯವನ್ನೇ ದೊರಕಿಸು.

## ಪರಿವಿಡಿ


- ಪರೀಕ್ಷಾ ಸಿದ್ಧತೆ 3
- ನುಡಿದಂತೆ ನಡೆದವನ ಅಡಿಗೆನ್ನ ನಮನ 4
- ವಿವೇಕಾನಂದರ ದೃಷ್ಟಿಯಂತೆ ಇದೆಯೇ ನಮ್ಮ ಶಿಕ್ಷಣ 5
- ಸಂಕಲ್ಪ ದಿನ 7
- ಇಂದಿನ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಹಿತವಚನ 8
- ಕಂಬನಿ 10

# ಪರೀಕ್ಷಾ ಸಿದ್ಧತೆ

## ■ ಶಿಕ್ಷಕರಿಗೆ ■

**ಆತ್ಮೀಯ ಶಿಕ್ಷಕರೇ ಇನ್ನೇನು ಪರೀಕ್ಷಾ ಮಾಸ ಸಮೀಪಿಸುತ್ತಿದೆ. ನಮ್ಮಿಂದ ಅಪೇಕ್ಷೆಗಳೂ ಅಪಾರ. ಶಾಲಾ ಫಲಿತಾಂಶ ಶೇಕಡಾವಾರು ಏರಬೇಕೆಂದು ಆಡಳಿತ ಮಂಡಳಿ, ಜಿಲ್ಲೆಯ ಶೇಕಡಾವಾರು ಮಟ್ಟ ಹೆಚ್ಚಾಗಬೇಕೆಂದು ಡಿ.ಡಿ.ಪಿ.ಐ. ಹೀಗೆ ಹಲವು ಬಗೆಯ ಒತ್ತಡಗಳು. ಅದನ್ನು ಪೂರೈಸಬೇಕಾದ ಹೊಣೆ ನಮ್ಮ ಹೆಗಲಿಗೆ. ಅದಕ್ಕಾಗಿಯೇ ನೀವು ತಿಳಿದಿರಬಹುದಾದ ಕೆಲವೊಂದು ಮಾಹಿತಿಗಳನ್ನು ನಿಮಗೆ ನೆನಪು ಮಾಡಿಕೊಡುವ ಪ್ರಯತ್ನ ಮಾಡಿದೆ.**

10. ಮಕ್ಕಳಲ್ಲಿ ಪರೀಕ್ಷಾ ಭಯ ಹುಟ್ಟಿಸದೆ, ಚೆನ್ನಾಗಿ ಓದಲು ಮಾತ್ರ ಪ್ರೇರಣೆ ನೀಡೋಣ. ಅವರಲ್ಲಿ ಧನಾತ್ಮಕ ಭಾವನೆ ಮಾತ್ರ ಬಿತ್ತೋಣ.

9. ಈ ಸಮಯದಲ್ಲೇ ಮಕ್ಕಳಲ್ಲಿ ಅನಾರೋಗ್ಯ ಹೆಚ್ಚುವುದು. ಇದು ಪರೀಕ್ಷಾ ಭಯ ಮತ್ತು ಗಾಬರಿಯಿಂದಲೂ ಸಾಧ್ಯ. ಅದಕ್ಕಾಗಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡೋಣ.

8. ಮಕ್ಕಳ ಮನೋಭಾವವೆಂದರೆ ತಮಗೆ ಇಷ್ಟವಾದುದನ್ನೇ ಹೆಚ್ಚು ಓದುವುದು. ತಿಳಿದಿದ್ದರೂ ಅದನ್ನೇ ಓದುವುದು. ಇದು ಸಮಯದ ದುರುಪಯೋಗವಲ್ಲದೆ ಮತ್ತೇನೂ ಅಲ್ಲ. ಆದ್ದರಿಂದ ಅವರಿಗೆ ಹೆಚ್ಚು ಕಷ್ಟವಾದ ವಿಷಯಗಳನ್ನು ಮೊದಲು ಓದಲು ಹೇಳಿ, ಅದನ್ನು ಅರ್ಥ ಮಾಡಿಕೊಳ್ಳಲು ಸಹಕಾರ ನೀಡೋಣ.

7. ಮಕ್ಕಳು ಪರೀಕ್ಷಾ ಸಿದ್ಧತೆ ಎಂದರೆ ಕೇವಲ ನೋಟ್ಸ್, ಪಠ್ಯ ಪುಸ್ತಕ ಓದುವುದೆಂದು ಭಾವಿಸಿ, ಪದೇ ಪದೇ ಓದಿದ್ದನ್ನೇ ಓದುತ್ತಾರೆ. ಆದರೆ ಬರವಣಿಗೆಯಲ್ಲಿ ತೊಡಗುವುದು ಕಡಿಮೆ. ಆದರಿಂದ ಅವರು ಹೆಚ್ಚು ಹೆಚ್ಚು ಬರೆಯುವಂತೆ – ಅದೂ ಸ್ವಂತ ವಾಕ್ಯಗಳಲ್ಲಿ – ಉತ್ತೇಜಿಸೋಣ. ಒಮ್ಮೆ ಬರೆಯುವುದು, ಹತ್ತು ಬಾರಿ ಓದಿದ್ದಕ್ಕೆ ಸಮ.

6. ನಮ್ಮ ಎಲ್ಲಾ ಮಕ್ಕಳೂ ತೀಕ್ಷ್ಣಮತಿಗಳಲ್ಲ. ನಿಧಾನ ಕಲಿಕೆಯವರೂ ಇರುತ್ತಾರೆ. ಅವರ ಬಗ್ಗೆ ಸ್ವಲ್ಪ ಹೆಚ್ಚು ಗಮನ ಕೊಡಿರಿ. ಅವರಿಗೆ ಸುಲಭವಾಗಿ ಕನಿಷ್ಠ 40 ಅಂಕ ಗಳಿಸುವ ರೀತಿಯನ್ನು ತಿಳಿಸಿರಿ. ಅಗತ್ಯ ಮಾರ್ಗದರ್ಶನದಿಂದ ಅಂಥಾ ಮಕ್ಕಳೂ ಪ್ರಥಮ ದರ್ಜೆ ಪಡೆದಿದ್ದಾರೆ. ಅಂಥವರಿಗಾಗಿ ವಿಶೇಷ ತರಗತಿಗಳನ್ನೂ ನಡೆಸಬಹುದು. (ಈ ಹಿಂದೆ ಶಿಕ್ಷಕ ಸಂಘವು ಇಂಥ ಪ್ರಯೋಗ ಮಾಡಿ ಸಫಲತೆ ಪಡೆದಿದೆ)

5. ಪುನರಾವರ್ತನೆ ಇಂದ ಮಕ್ಕಳಿಗೆ ಹೆಚ್ಚಿನ ಲಾಭವಿದೆ. ಆದರೆ ಅದು ಯಾಂತ್ರಿಕವಾಗಬಾರದು. ಕಲಿಕೆ ಖುಷಿ ನೀಡಬೇಕು. ಅದಕ್ಕಾಗಿ ಪುನರಾವರ್ತನೆಯನ್ನು ಹೊಸ ಹೊಸ ರೀತಿ ಮಾಡಿಸಿರಿ. ಉದಾ: ರಸಪ್ರಶ್ನೆ, ಮನೆ ಪರೀಕ್ಷೆ, ಗೆಳೆಯರ ನಡುವೆ ಚರ್ಚೆ ಇತ್ಯಾದಿ.

4. ಪ್ರತಿ ವಿದ್ಯಾರ್ಥಿಯನ್ನೂ ವೈಯಕ್ತಿಕವಾಗಿ ಮಾತನಾಡಿಸಿ ಅವನ ಸಮಸ್ಯೆ ಅರಿಯಿರಿ. ನಾಲ್ಕು ಪ್ರೋತ್ಸಾಹದ ಮಾತಾಡಿ ಧೈರ್ಯ ತುಂಬೋಣ.

3. ಪೋಷಕರ ಸಭೆ ನಡೆಸಿ ಅವರು ಈ ಸಮಯದಲ್ಲಿ ಮಕ್ಕಳೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ತಿಳಿಸೋಣ.

2. ಪರೀಕ್ಷಾ ಭಯ ನಿವಾರಣೆಗಾಗಿ, ಅವರಿಗೆ ಪ್ರೇರಣೆ ಸಿಗುವ ವಾಕ್ಯಗಳನ್ನು, ನಿಮ್ಮ ಹಿಂದಿನ ಅನುಭವಗಳನ್ನು, ಉತ್ಸಾಹ ಬರುವ ನುಡಿಗಳನ್ನು ಬರೆಸೋಣ ಉದಾ : ನಿನ್ನಲ್ಲಿ ಅಪರಿಮಿತ ಶಕ್ತಿ ಇದೆ. ನೀನು ಏನನ್ನು ಬೇಕಾದರೂ ಸಾಧಿಸಬಲ್ಲೆ –ಸ್ವಾಮಿ ವಿವೇಕಾನಂದ

1. ಮಕ್ಕಳ ಮುಂದೆ ನಗು ನಗುತ್ತ ಇರೋಣ. ನಮ್ಮ ದುಃಖ ದುಮ್ಮಾನಗಳನ್ನು ಅವರಲ್ಲಿ ತೆರೆದಿಡುವುದು ಬೇಡ.

ಇಷ್ಟು ಸಾಕೆಂದು ಅನ್ನಿಸುತ್ತಿದೆ. ಉಳಿದದ್ದು ನಿಮ್ಮ ನಿಮ್ಮ ಕಲ್ಪನೆಗೆ ಬಿಟ್ಟದ್ದು.....

**"ಸಾಧ್ಯವಾಗದು" ಎಂಬ ಸಂಗತಿ ಜಗತ್ತಿನಲ್ಲಿ ಯಾವುದೂ ಇಲ್ಲ. ಪ್ರಯತ್ನ ಪಟ್ಟರೆ ನರನೂ ನಾರಾಯಣನಾಗಬಹುದು.**

(ಪುಟ 6ಕ್ಕೆ….)

ಅಧ್ಯಕ್ಷರ ಫ್ಯಾಕ್ಸ್‌ನಿಂದ.........

**ಕೆ. ಬಾಲಕೃಷ್ಣ ಭಟ್,** Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ನುಡಿದಂತೆ ನಡೆದವನ ಅಡಿಗೆನ್ನ ನಮನ

ಸಂಘಟನೆಯಲ್ಲಿ ಶಕ್ತಿ ಅಡಗಿದೆ ಎಂಬ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಸಂಘೇಶಕ್ತಿಃ ಕಲೌಯುಗೇ ಎನ್ನುವ ಮಾತು ಅದನ್ನೇ ಹೇಳುತ್ತದೆ. ಕಲಿಯುಗದಲ್ಲಿ ಮಾತ್ರವಲ್ಲ ಎಲ್ಲಾ ಯುಗಗಳಲ್ಲಿಯೂ ಸಂಘಟನೆಗೆ, ಒಗ್ಗಟ್ಟಿಗೇ ಬೆಲೆ ಬಂದಿರುವುದು. ಸಂಹತಿಃ ಕಾರ್ಯಸಾಧಕಾ – ಒಟ್ಟಾಗಿದ್ದರೆ ಮಾತ್ರ ಕಾರ್ಯವು ಸುಲಭ ಸಾಧ್ಯವಾಗುವುದು ಎಂದು ಇದರ ಅರ್ಥ.

ಈ ಎಲ್ಲಾ ನುಡಿಗಳಿಗೆ ಬೆಲೆ ಬರಬೇಕಾದರೆ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ, ತನ್ನತನ, ಸ್ವಾರ್ಥ–ಇವುಗಳನ್ನೆಲ್ಲಾ ಬದಿಗಿಟ್ಟು ಸಂಘಟನೆಗಾಗಿ ಅಂದರೆ ಸಾಮೂಹಿಕ ಸುಖಕ್ಕಾಗಿ– ಒಟ್ಟಾರೆ ಹಿತಕ್ಕಾಗಿ ದುಡಿಯುವ, ಬದುಕುವ, ಅಗತ್ಯವಿದ್ದಾಗ ಜೀವವನ್ನು ತ್ಯಾಗಮಾಡುವ ಕಾರ್ಯಕರ್ತರ ದೊಡ್ಡ ಪಡೆ ಇರಬೇಕಾಗುತ್ತದೆ. ಇಂತಹ ಕಾರ್ಯಕರ್ತರ ಪಡೆಯನ್ನೇ 'ಸಂಘಟನೆ' ಎಂದು ಪರಿಗಣಿಸುವುದು. ಸಂಘಟನೆಯಲ್ಲಿ ವೈಯಕ್ತಿಕ ಸುಖ ಮತ್ತು ಸ್ವಾರ್ಥವನ್ನು ಬಯಸಲಾಗದು. ಕೆಲವೊಮ್ಮೆ ವೈಯಕ್ತಿಕ ಸುಖ ಮತ್ತು ಸಂಘಟನೆಯ ಹಿತ ವಿರುದ್ಧ ದಿಕ್ಕಿನಲ್ಲಿಯೂ ಇರಬಹುದು. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ–ಮಡಿದ ಲಕ್ಷಾಂತರ ಮಂದಿ ವೈಯಕ್ತಿಕ ಸ್ವಾರ್ಥ–ಸುಖಗಳೆರಡನ್ನೂ ಮರೆತು, ತ್ಯಜಿಸಿ ಸಾಮೂಹಿಕ ಸುಖಕ್ಕೋಸ್ಕರ ಜೀವ ತೊರೆದಿದ್ದಾರೆ. ಅವರು ತಮ್ಮ ವೈಯಕ್ತಿಕ ಸುಖದ ಹಿಂದೆ ಹೋಗಿದ್ದರೆ ಇಂದು ನಾವು ಸ್ವತಂತ್ರ ಬದುಕು ಅನುಭವಿಸುತ್ತಿರಲಿಲ್ಲ.

ನಮ್ಮ ಸ್ವಾತ್ರಂತ್ರ್ಯ ಸಂಗ್ರಾಮದಲ್ಲಿ ಸಾವರ್ಕರ್‌ರ ಹಿಂದೂ ಮಹಾಸಭಾ, ಸುಭಾಷ್‌ಚಂದ್ರಬೋಸರ I-N-A, ತಿಲಕ್–ಗಾಂಧಿ ನೇತೃತ್ವದ ಕಾಂಗ್ರೆಸ್ ಮಾತ್ರವಲ್ಲದೆ ಇನ್ನೂ ಅನೇಕ ಸಂಘಟನೆಗಳು ಜೀವದ ಹಂಗು ತೊರೆದು ಹೋರಾಡಿದ್ದರಿಂದ ಬ್ರಿಟೀಷರು ದೇಶಬಿಟ್ಟು ಹೋಗುವಂತಾಯಿತು. ಹೆಸರೇ ಕೇಳದ, ಬೆಳಕಿಗೇ ಬಾರದ, ಸಹಸ್ರಾರು ಯುವಕ್ರಾಂತಿಕಾರಿಗಳು ನಗುನಗುತ್ತಾ ನೇಣುಗಂಬ ಏರಿದ್ದು ಇಡೀ ದೇಶದ ಸ್ವಾತಂತ್ರ್ಯವೆಂಬ ಸಾಮೂಹಿಕ ಸುಖಕ್ಕಾಗಿ. ಹಿರಿಯ ಆದರ್ಶಕ್ಕಾಗಿ.

ಆದರ್ಶದ ಸಾಕ್ಷಾತ್ಕಾರಕ್ಕಾಗಿ ಆರಂಭಗೊಂಡ ಮೇಲಿನ ಹಾಗೂ ಇತರೇ ಸಂಘಟನೆಗಳು ಕಾಲಕ್ರಮೇಣ ತಮ್ಮ ಸತ್ವವನ್ನು, ಸ್ವತ್ವವನ್ನು ಕಳೆದುಕೊಂಡು ಅವುಗಳ ಮೂಲ ಉದ್ದೇಶದಿಂದ ದೂರ, ಬಹುದೂರ ಸಾಗಿ ಕೇವಲ ಹೆಸರಿಗೆ ಮಾತ್ರ ಉಳಿದು ಇತಿಹಾಸದ ಪುಟಗಳಲ್ಲಿ ಮಾತ್ರ ಕಾಣಸಿಗುವಂತಾಗಿದೆ.

ಯಾವುದೇ ಮನೆತನ, ಉದ್ಯಮ ಅಥವಾ ಯಾವುದೇ ಪಕ್ಷ, ಸಂಘಟನೆ ಸ್ಥಾಪಿಸಲ್ಪಟ್ಟ ಎರಡು ತಪ್ಪಿದರೆ ಮೂರು ತಲೆಮಾರುಗಳ ಕಾಲ ತನ್ನ ಮೂಲ ಛವಿಯನ್ನು ಉಳಿಸಿಕೊಂಡಿರುವುದನ್ನು ಕಳೆದ ಒಂದು ನೂರು ವರ್ಷಗಳಲ್ಲಿ ಕಂಡಿದ್ದೇವೆ. ಕೆಲವೊಮ್ಮೆ ಹೊರಗಿನ ಪ್ರಪಂಚಕ್ಕೆ ಕಾಣಲು ಮಾತ್ರ ಅದೇ ಆದರ್ಶದಲ್ಲಿ ಮುಂದುವರಿಯುವಂತೆ ಕಾಣುವುದಾದರೂ ನಿಜವಾದ ಅರ್ಥದಲ್ಲಿ ಅದರ ಮೂಲ ಉದ್ದೇಶದಿಂದ, ಮೊದಲ ಕಾರ್ಯಪದ್ಧತಿಯಿಂದ ಬಲು ದೂರ ಸಾಗಿರುವುದನ್ನು ಕಾಣುತ್ತೇವೆ. ಬಹುಷಃ ಇದನ್ನು ಮನಗಂಡೇ ಇರಬೇಕು ಸ್ವಾತಂತ್ರ್ಯ ಬಂದ ನಂತರ 'ಕಾಂಗ್ರೆಸ್' ಸಂಸ್ಥೆಯನ್ನು ವಿಸರ್ಜಿಸುವಂತೆ ಮಹಾತ್ಮಗಾಂಧಿ ಹೇಳಿರುವುದು. ಅಂದಿನ ಕಾಂಗ್ರೆಸ್‌ಗೂ ಇಂದಿನ ಕಾಂಗ್ರೆಸ್‌ಗೂ ಹೆಸರಲ್ಲಿ ಮಾತ್ರ ಸಮಾನತೆ ಉಳಿದಿರುವುದನ್ನು ಕಾಣುತ್ತೇವೆ.

ಸಂಘಟನೆಯ ಪ್ರಮುಖನಿರಲಿ, ಕಾರ್ಯಕರ್ತನಿರಲಿ ತಾನು ಹೇಳುವುದಕ್ಕೂ ಮಾಡುವುದಕ್ಕೂ ಅಂತರವಿಲ್ಲದೆ ಇದ್ದಾಗ ಮಾತ್ರ ಆ ಸಂಸ್ಥೆ ಬಹಳ ಕಾಲ ಉಳಿಯುತ್ತದೆ. ಜನರ ಗೌರವಕ್ಕೆ ಪಾತ್ರವಾಗುತ್ತದೆ. ಎಷ್ಟೇ ಮಹೋನ್ನತ ರಾಷ್ಟ್ರೀಯ ಉದ್ದೇಶದ ಸಂಸ್ಥೆಗಳಾಗಲೀ ಇನ್ನಿತರ ಸ್ವಯಂಸೇವಾಸಂಸ್ಥೆಗಳಾಗಲೀ ಅದನ್ನು ಮುನ್ನಡೆಸುವ ಪ್ರಮುಖರ ನಡೆ–ನುಡಿಯ ಮೇಲೆ ಅದರ ಬೆಳವಣಿಗೆ, ಆಯುಷ್ಯ ನಿಂತಿರುತ್ತದೆ. ಈ ಮಾತು ಇಂದಿನ ರಾಜಕಾರಣಕ್ಕೆ ಮಾತ್ರ ಅನ್ವಯಿಸುವುದಲ್ಲ. ಯಾವುದೇ ಸಾಮಾಜಿಕ–ಸಾಂಸ್ಕೃತಿಕ ಸಂಘಟನೆಯೂ ಈ ನಿಯಮಕ್ಕೆ ಒಳಪಟ್ಟೇ ಇರುತ್ತದೆ. ಸ್ವಲ್ಪ ಕಾಲ ಮಾತ್ರ ಸಂಘಟನೆಯ ಪ್ರಮುಖರೆಂದುಕೊಳ್ಳುವ ವ್ಯಕ್ತಿಗಳು ಸಂಘಟನೆ ಗಳಿಸಿದ ಪುಣ್ಯದ ಮೇಲೆ ಬದುಕಲು ಸಾಧ್ಯ. ನಂತರದಲ್ಲಿ ತಾವು ದಿನನಿತ್ಯ, ಕಾರ್ಯಕರ್ತರ ಮಧ್ಯೆ, ಸಮಾಜದ ಮಧ್ಯೆ ಆಡುವ, ಮಾಡುವ, ನುಡಿ ಮತ್ತು ನಡೆಯ ಆಧಾರದಲ್ಲಿ

(ಪುಟ 5ಕ್ಕೆ....)

# ವಿವೇಕಾನಂದರ ದೃಷ್ಟಿಯಂತೆ ಇದೆಯೇ ನಮ್ಮ ಶಿಕ್ಷಣ?

ದಿನಾಂಕ 18.1.2013 ಶುಕ್ರವಾರ ದಂದು ಸ್ವಾಮಿವಿವೇಕಾನಂದ 150ರ ಜನ್ಮ ವರ್ಷಾಚರಣೆ ಅಡಿಯಲ್ಲಿ ಶಿಕ್ಷಿಕಿಯರಿಗಾಗಿ "ರಾಷ್ಟ್ರ ಪುನರ್ ನಿರ್ಮಾಣದಲ್ಲಿ ಶಿಕ್ಷಕಿಯರ ಪಾತ್ರ–ವಿವೇಕಾನಂದರ ದೃಷ್ಟಿ". ಈ ವಿಷಯಕ್ಕೆ ಸಂಬಂಧಿಸಿದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾರಾಜ ಸರ್ಕಾರೀ ಪದವಿ ಪೂರ್ವ ಕಾಲೇಜಿನ ಕೃಷ್ಣರಾಜ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ತುಮಕೂರಿನ ರಾಮಕೃಷ್ಣ ಮಠದ ಶ್ರೀ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿಯುವರು ಉದ್ಘಾಟಿಸಿದರು. "ಇಂದಿನ ಶಿಕ್ಷಣ ವ್ಯವಸ್ಥೆ ವಿದ್ಯಾವಂತರನ್ನು ರೂಪಿಸುತ್ತಿಲ್ಲ ಬದಲಿಗೆ ಗುಲಾಮರನ್ನು, ವಿದ್ಯಾವಂತ ಮೋಸಗಾರರನ್ನು ಭ್ರಷ್ಟ ಮಾರ್ಗದಲ್ಲಿ ಹಣ ಸಂಪಾದಿಸುವವರನ್ನು ತಯಾರಿಸುತ್ತಿದೆ" ಎಂದು ವಿಷಾದ ವ್ಯಕ್ತಪಡಿಸಿದರು.

ಅಧ್ಯಯನದ ಕೊರತೆಯಿಂದಾಗಿ ಶಿಕ್ಷಕರ ಬೋಧನಾ ಮಟ್ಟ ಕಳಪೆಯಾಗಿದ್ದು ವಿಶ್ವವಿದ್ಯಾಲಯಗಳು ರಚನಾತ್ಮಕ ಕೆಲಸವನ್ನು ಮಾಡುತ್ತಿಲ್ಲ. ಇಂದು ಅವಿದ್ಯಾವಂತರಿಗಿಂತ ವಿದ್ಯಾವಂತರೇ ಸಮಾಜಕ್ಕೆ ಮಾರಕವಾಗಿದ್ದಾರೆ ಮತ್ತು ಇಂದಿನ ಶಿಕ್ಷಣ ವ್ಯವಸ್ಥೆ ಮಕ್ಕಳಿಗೆ ದೇಶವನ್ನು ಗೌರವಿಸುವುದನ್ನು ಕಲಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಶಿಕ್ಷಕರು ಮತ್ತು ಪೋಷಕರ ಸಂಬಂಧ ಇಲ್ಲದಿರುವುದು ಶಿಕ್ಷಣದಲ್ಲಿ ಅನೇಕ ರೀತಿಯ ತೊಂದರೆಗಳಾಗಲು ಮುಖ್ಯ ಕಾರಣವಾಗಿದೆ ಎಂದು ವಿಷಾದಿಸಿದರು. ಶಿಕ್ಷಕರು ವಿಶಾಲ ಹೃದಯಿಗಳಾಗಿದ್ದು ಮಕ್ಕಳಿಗೆ ತಾಯಿಯುನ್ನು ಗೌರವಿಸುವುದನ್ನು ಹೇಳಿಕೊಡಬೇಕು. ಶಿಕ್ಷಕರು ಮಕ್ಕಳನ್ನು ಮನುಷ್ಯರಂತೆ ರೂಪಿಸಿದ್ದೇ ಆದರೆ ಮಕ್ಕಳು ಅವರಿಗೆ ಬೇಕಾದ ಸ್ವಾತಂತ್ರ್ಯವನ್ನು ಕಂಡುಕೊಳ್ಳುತ್ತಾರೆ.

ವಿವೇಕಾನಂದರ ಸಮಗ್ರ ಪರಿಚಯ, ಜೀವನಶೈಲಿ, ಅವರ ವೈಚಾರಿಕತೆ, ಕಾರ್ಯವೈಖರಿ, ದೇಶಾಭಿಮಾನ ಇವುಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ತಿಳಿಸಿದರು. ವಿವೇಕಾನಂದರ ಆದರ್ಶಗಳನ್ನು ಶಿಕ್ಷಕಿಯರು ಅಳವಡಿಸಿಕೊಂಡರೆ ಭಾರತದ ಭವಿಷ್ಯ ಉತ್ತುಂಗಕ್ಕೇರುತ್ತದೆ ಎನ್ನುವ ಆಶಾಭಾವನೆ ವ್ಯಕ್ತಪಡಿಸಿದರು.

ಶಿಕ್ಷಕಸಂಘದ ಪರಿಚಯವನ್ನು ಸಂಘದ ಮಹಿಳಾ ವಿಭಾಗದ ರಾಜ್ಯಮುಖ್ಯಸ್ಥೆಯಾದ ಶ್ರೀಮತಿ ಆರ್. ಸೀತಾಲಕ್ಷ್ಮಿಯವರು ಮಾಡಿದರು. ಅಖಿಲ ಭಾರತೀಯ ಶೈಕ್ಷಿಕ್ ಮಹಾಸಂಘದ ಪೋಷಕರಾದ ಪ್ರೊ. ಕೃ. ನರಹರಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷ ಕೆ. ಬಾಲಕೃಷ್ಣ ಭಟ್ ಮತ್ತು ಪದವಿಪೂರ್ವ ಇಲಾಖೆಯ ಉಪ ನಿರ್ದೇಶಕರು ಶ್ರೀ ಕೆ. ಎಂ. ಪುಟ್ಟು ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಎಂ. ನಾಗರಾಜರವರು, ಶಾಸಕ ಅರುಣ ಶಾಪೂರ್‌ರವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ನಂತರದ ಮೂರು ಗೋಷ್ಠಿಗಳು ನಡೆದವು. ಮೊದಲನೆಯದರಲ್ಲಿ ಡಾ. ಉಷಾದೇವಿ ಕನ್ನಡ ವಿಭಾಗದ ಮುಖ್ಯಸ್ಥೆ ಪ್ರಥಮ ದರ್ಜೆ ಕಾಲೇಜು, ಟಿ. ನರಸೀಪುರ ಇವರು 'ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕಿ' ಎಂಬ ಪ್ರಬಂಧ ಮಂಡಿಸಿದರು. ಎರಡನೇ ಗೋಷ್ಠಿಯಲ್ಲಿ ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಡಾ. ಹೆಚ್. ಎಂ. ವಸಂತಮ್ಮ 'ವಿವೇಕಾನಂದ – ಆದರ್ಶ – ನಿವೇದಿತಾ' ಎಂಬ ಪ್ರಬಂಧವನ್ನು ಮಂಡಿಸಿದರು. ಮೂರನೇ ಹಾಗೂ ಕೊನೇ ಗೋಷ್ಠಿಯುಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಶ್ರೀಮತಿ ಬಿ. ಟಿ. ಪೋಷಿಣಿ ಅವರು 'ವಿವೇಕಾನಂದರ ಕಲ್ಪನೆಯಲ್ಲಿ ರಾಷ್ಟ್ರನಿರ್ಮಾಣ' ಎಂಬ ವಿಷಯ ಕುರಿತು ಪ್ರಬಂಧ ಮಂಡಿಸಿ ಚರ್ಚೆ ನಡೆಸಿದರು.

ಸಮಾರೋಪ ಸಮಾರಂಭದಲ್ಲಿ ಮಾಜಿ ಶಾಸಕ ಶ್ರೀ ಬಾಲಕೃಷ್ಣ ಭಟ್ ಅವರು ಶಿಕ್ಷಕರನ್ನು ವಿವೇಕಾನಂದರ ಆದರ್ಶಗಳನ್ನು ಪಾಲಿಸಬೇಕೆಂದು ಕರೆನೀಡಿದರು.

ಒಟ್ಟಾರೆ ಮೈಸೂರಿನ ಕಾರ್ಯಕ್ರಮ ಶಿಕ್ಷಕಿಯರಿಗೆ ಪ್ರೇರಣಾದಾಯಕವಾಗಿತ್ತು. **ವರದಿ : ಶ್ರೀಮತಿ ಸೀತಾ**

(ಚಿತ್ರ – ಪುಟ 11 ರಲ್ಲಿ)

---

4ನೇ ಪುಟದಿಂದ..... **ನುಡಿದಂತೆ...**

ಮಾತ್ರ ಗೌರವ – ಮರ್ಯಾದೆಗಳಿಸಲು ಸಾಧ್ಯ. ಸಂಘಟನೆ ಬೆಳೆಸಲು ಶಕ್ಯ.

ನಾವು ಮಾಡುವ ಭಾಷಣ, ಚರ್ಚೆ ಇವೆಲ್ಲವೂ ನಮ್ಮ ಸಿದ್ಧಾಂತವನ್ನು ಹೊಸ ಕಾರ್ಯಕರ್ತರಿಗೆ ಮನದಟ್ಟು ಮಾಡುವ ಕೆಲಸ ಮಾತ್ರ ಮಾಡಬಹುದು. ಪ್ರಮುಖನಾದವನು ಹೇಳುವುದೊಂದು, ಮಾಡುವುದೊಂದು ಎಂಬುದು ಕಾರ್ಯಕರ್ತನಿಗೆ ಅರಿವಾಗಲು ಬಹಳ ಸಮಯ ಬೇಕಾಗುವುದಿಲ್ಲ. ಯುವ ಕಾರ್ಯಕರ್ತರು, ವಿದ್ಯಾರ್ಥಿಗಳು ಆದರ್ಶದ ಸುವಾಸನೆಯಿಂದ ಬಹಳ ಬೇಗ ಆಕರ್ಷಿತರಾಗುತ್ತಾರೆ. ಮತ್ತು ಅಷ್ಟೇ ಬೇಗ ಅದರ ನಿಜವಾದ ವಾಸನೆಯನ್ನು ಗ್ರಹಿಸಿಯೂ ಬಿಡುತ್ತಾರೆ. ಉತ್ತಮ ಮೇಲ್ಪಂಕ್ತಿಯಿಂದ ಮಾತ್ರ ಅಂತಹವರನ್ನು ಸಂಘಟನೆಯಲ್ಲೇ ಉಳಿಸಿಕೊಳ್ಳಲು ಸಾಧ್ಯ. ●

## ■ ವಿದ್ಯಾರ್ಥಿಗಳಿಗೆ ■

3ನೇ ಪುಟದಿಂದ..... **ಪರೀಕ್ಷಾ ಸಿದ್ಧತೆ**

**ಇದು ಫೆಬ್ರವರಿ ತಿಂಗಳು ಒಂದನೆಯ ತರಗತಿಯಿಂದ ಹಿಡಿದು ಹತ್ತನೆಯ ತರಗತಿ ಅಷ್ಟೇಕೆ, ಪಿ.ಯು.ಸಿ. ವರೆಗಿನ ವಿದ್ಯಾರ್ಥಿಗಳಿಗೆ ಪರ್ವಕಾಲ. ವಿದ್ಯಾರ್ಥಿಗಳಿಗಂತೂ ಪರೀಕ್ಷೆ ಮುಗಿಯುವವರೆಗೂ ಆತಂಕ. ಪೋಷಕರು, ಶಿಕ್ಷಕರಿಗೆ ಕಡಮೆ ಏನಲ್ಲ ಆತಂಕ. ಮಕ್ಕಳು ಹೇಗೆ ಪರೀಕ್ಷೆಗೆ ತಯಾರಾಗುತ್ತಾರೋ, ಎಷ್ಟು ಅಂಕ ಗಳಿಸುತ್ತಾರೋ ಎಂಬ ತವಕ ಇದ್ದೇ ಇರುತ್ತದೆ. ತಂದೆ ತಾಯಿಯರ, ಶಿಕ್ಷಕರ ಆತಂಕ ದೂರ ಮಾಡಲು ವಿದ್ಯಾರ್ಥಿಗಳು ಪರೀಕ್ಷೆಯ ಈ ಸಮಯದಲ್ಲಿ ಅನುಸರಿಸಬೇಕಾದ ವಿಷಯಗಳ ಬಗ್ಗೆ ಗಮನ ಸೆಳೆಯುತ್ತಿದ್ದೇವೆ. ಇದರಿಂದ ನಿಮ್ಮ ವಿದ್ಯಾಭ್ಯಾಸ, ಪರೀಕ್ಷೆ ತಯಾರಿ ಸುಲಭ ಹಾಗೂ ಆತಂಕ ರಹಿತವಾಗಿರುತ್ತದೆ. ಇದೋ ನಿಮಗೆ ಸಲಹೆಗಳು.**

1. ಓದಿನಲ್ಲಿ ನಿಮಗೆ ಪ್ರೀತಿ ಇರಲಿ. ಇಷ್ಟಪಟ್ಟು ಓದಿ, ಆನಂದದಿಂದ ಓದಿ. ಸ್ವಯಂ ಸ್ಫೂರ್ತಿಯಿಂದ ಓದಿ. ಆಸಕ್ತಿ ಇರಲಿ ಓದಿನಲ್ಲಿ. ಕುತೂಹಲದಿಂದ ಓದಿ. ಕೇವಲ ಪರೀಕ್ಷೆಗಾಗಿ ಓದದೆ, ಜ್ಞಾನಾರ್ಜನೆಗಾಗಿ ಓದಿ. ವಿದ್ಯಾಭ್ಯಾಸಕ್ಕೆ ಬೇಕಾದ ಏಕಾಗ್ರತೆ ಆಗ ಸಿದ್ಧಿಸುತ್ತದೆ.
2. ನಿಮ್ಮ ಅಧ್ಯಯನ ಶಿಸ್ತುಬದ್ಧವಾಗಿರಬೇಕು ದಿನದಲ್ಲಿ ಕನಿಷ್ಠ ನಾಲ್ಕು ಘಂಟೆಯಾದರೂ ಓದಬೇಕು. ಅದಕ್ಕಾಗಿ ಬೆಳಗ್ಗೆ, ಸಾಯಂಕಾಲ ನಿಗದಿತ ಸಮಯದಲ್ಲಿ ತಪ್ಪದೆ ಓದುವುದು ಅಗತ್ಯ.
3. ಪರೀಕ್ಷೆಯ ಸಲುವಾಗಿ ಸ್ವಲ್ಪ ಭಯ ಸಹಜವಾಗಿ ಇರುತ್ತದೆ. ನೀವು ಚೆನ್ನಾಗಿ ಓದಿ, ಓದಿದ್ದರಲ್ಲಿ ಆತ್ಮವಿಶ್ವಾಸ ಬೆಳೆಸಿಕೊಂಡರೆ ಭಯ ಕ್ರಮೇಣ ಕಡಿಮೆಯಾಗುತ್ತದೆ. ಚಿಕ್ಕ ಚಿಕ್ಕ ವಿಷಯಗಳಿಗೆ ಅನಗತ್ಯವಾಗಿ ಉದ್ವೇಗ ಹೊಂದಬೇಡಿ. ನನಗೆ ಅದು ಬರುವುದಿಲ್ಲ, ಇದು ಬರುವುದಿಲ್ಲ ಎಂಬ ನಕಾರಾತ್ಮಕ ಆಲೋಚನೆಗಳನ್ನು ದೂರವಿಡಿ.
4. ಈಗ ನಿಮ್ಮ ಸಮಯ ತುಂಬಾ ಅಮೂಲ್ಯ. ನಿಮಗೆ ಕಷ್ಟವೆನಿಸಿದ ವಿಷಯಗಳಿಗೆ ಹೆಚ್ಚು ಗಮನ ಕೊಡಿ. ಕಷ್ಟ ಎಂಬ ಕಾರಣಕ್ಕೆ ಓದು ಕಡಿಮೆ ಮಾಡಬೇಡಿ. ಸುಲಭವೆನಿಸುವ ವಿಷಯಗಳ ಬಗ್ಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳಿ. ಯಾವ ವಿಷಯವನ್ನೂ ನಿರ್ಲಕ್ಷ್ಯ ಮಾಡಬೇಡಿ.
5. ಉರು ಹೊಡೆಯುವುದಕ್ಕಿಂತ ವಿಷಯವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಅರ್ಥ ಮಾಡಿಕೊಳ್ಳಲು ಗಮನವಿಟ್ಟು ಓದಿ. ಓದಿದ್ದನ್ನು ಬರೆಯುವ ಪ್ರಯತ್ನ ಮಾಡಿ.
6. ಮುಖ್ಯವಾದ ಸಂಗತಿಗಳನ್ನು ಪ್ರತ್ಯೇಕವಾಗಿ ಬರೆದುಕೊಳ್ಳಿ ನೆನಪಿಡಬೇಕಾದ ಸಂಗತಿಗಳನ್ನು ಮತ್ತೆ ಮತ್ತೆ ಬರೆದು ಅಭ್ಯಾಸ ಮಾಡಿ. ಗಣಿತದ ಲೆಕ್ಕಗಳನ್ನು ಬೇರೆ ಬೇರೆ ವಿಧಾನದಲ್ಲಿ ಮತ್ತೆ ಮತ್ತೆ ಮಾಡಿ. ಚಿತ್ರಗಳನ್ನು ಎರಡು ಮೂರು ಸಲ ಬಿಡಿಸಿ ಅಭ್ಯಾಸ ಮಾಡುವ ಮೂಲಕ ಅವುಗಳನ್ನು ಬೇಗ ಬಿಡಿಸುವಂತೆ ಪರಿಣತೆ ಹೊಂದಿರಿ.
7. ಗಡಿಬಿಡಿಯಲ್ಲಿ ಏನನ್ನೂ ಮಾಡಬೇಡಿ. ನಿಗದಿತ ಕಾಲದಲ್ಲಿ ನಿಧಾನವಾಗಿ ಅಧ್ಯಯನ ಮಾಡಿ. ನೀವು ಎಷ್ಟು ಸಲ ವಿಷಯ ತಿರುವಿ ಹಾಕಿದ್ದೀರಿ ಎನ್ನುವುದು ಮುಖ್ಯವಲ್ಲ. ಎಷ್ಟು ಚೆನ್ನಾಗಿ ವಿಷಯವನ್ನು ಅರ್ಥಮಾಡಿಕೊಂಡಿದ್ದೀರಿ ಎನ್ನುವುದು ಮುಖ್ಯ.
8. ನಿಮ್ಮ ದಿನನಿತ್ಯದ ನಿದ್ರೆಯನ್ನು ಕಡಿಮೆ ಮಾಡಿಕೊಳ್ಳಬೇಡಿ. ಅದರಲ್ಲೂ ಪರೀಕ್ಷೆಯ ಹಿಂದಿನ ದಿನಗಳು ನಿದ್ರೆಕೆಡುವುದು ಸರಿಯಲ್ಲ. ಆಹಾರ, ಆಟ, ವಿನೋದ, ವಿಹಾರ ಯಾವುದನ್ನೂ ಕಡಿಮೆಮಾಡಬೇಡಿ. ಮನೆಯವರು, ಸ್ನೇಹಿತರೊಂದಿಗೆ ಸಂತೋಷದಿಂದಿರಿ.
9. ಬೇರೆಯವರೊಡನೆ ಹೋಲಿಕೆ ಮಾಡಿಕೊಳ್ಳುವುದು ಸರಿಯಲ್ಲ. ಅವರಲ್ಲಿ ಇಲ್ಲದ ಸಾಮರ್ಥ್ಯ ನಿಮ್ಮಲ್ಲಿ ಇರಬಹುದು. ನಿಮಗೆ ಕಷ್ಟವೆನಿಸಿದ ವಿಷಯಗಳಿಗೆ ಹೆಚ್ಚು ಗಮನ ಕೊಟ್ಟು ಓದಿ, ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಿ.
10. ಕಷ್ಟವಿದ್ದಾಗ ಅದನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ಒಳ್ಳೆಯದು. ನಿಮಗೇನಾದರೂ ಸಮಸ್ಯೆ ಇದ್ದರೆ ನಿಮ್ಮ ಸ್ನೇಹಿತರು, ಗುರುಗಳು, ತಂದೆ ತಾಯಿಗಳೊಂದಿಗೆ ಹೇಳಿಕೊಳ್ಳಿ ಇದರಿಂದ ಪರಿಹಾರ ಸಿಗುತ್ತದೆ. ಮನಸ್ಸೂ ಹಗುರವಾಗುತ್ತದೆ.

**ವಿದ್ಯಾರ್ಥಿಗಳೇ, ನಿಮಗೆಲ್ಲರಿಗೂ ಪರೀಕ್ಷೆಗಳಲ್ಲಿ ಯಶಸ್ಸು ಸಿಗಲಿ, ಶುಭಾಶಯಗಳು.**

(7ನೇ ಪುಟಕ್ಕೆ.....)

## ■ ಪೋಷಕರಿಗೆ ಕಿವಿಮಾತು ■

7ನೇ ಪುಟದಿಂದ..... **ಪರೀಕ್ಷಾ ಸಿದ್ಧತೆ**

**ಆತ್ಮೀಯ ಪೋಷಕರೇ, ನಿಮ್ಮ ಮಗು ನಿಮಗೆ ಮಾತ್ರ ಸೇರಿದ್ದಲ್ಲ. ಅದು ಸಮಾಜದ ಆಸ್ತಿ. ಅದನ್ನು ಉತ್ತಮ ನಾಗರೀಕನನ್ನಾಗಿ ಬೆಳೆಸುವ ಜವಾಬ್ದಾರಿ ನಿಮ್ಮ ಮೇಲಿದೆ. ಪರೀಕ್ಷಾ ಸಮಯವೆಂದರೆ ಅದರ ಮನಸ್ಸು ಒತ್ತಡಕ್ಕೊಳಗಾಗುವ ಕಾಲ. ಅದು ಹದಿಹರೆಯದ ಕಾಲವೂ ಹೌದು. ಆದ್ದರಿಂದ ಈ ಸಮಯದಲ್ಲಿ ನಾವು ಪೋಷಕರು ಎಚ್ಚರಿಕೆಯಿಂದ ಇರಬೇಕು. ಇಲ್ಲೊಂದಿಷ್ಟು ಕಿವಿ ಮಾತಿದೆ ಕಿವಿಗೊಟ್ಟು ಅದರಂತೆ ನಡೆಯಬಹುದೇ?**

1. ನಿಮ್ಮ ಮಗುವಿಗೆ ಪರೀಕ್ಷೆಯ ಮಹತ್ವ ತಿಳಿಸಿಕೊಡಿ. ಆದರೆ ಪರೀಕ್ಷೆಯೇ ಜೀವನದ ಸರ್ವಸ್ವವಲ್ಲ ಎಂಬುದನ್ನು ತಿಳಿಸಲು ಮರೆಯಬೇಡಿ. ಅಧಿಕ ಅಂಕ ಗಳಿಸದಿದ್ದವರೂ ಜೀವನದಲ್ಲಿ ಯಶಸ್ವಿಯಾಗಿದ್ದಾರೆ. ರ್‍ಯಾಂಕ್ ಬಂದವರೂ ಜೀವನದ ಪರೀಕ್ಷೆಯಲ್ಲಿ ಫೇಲಾಗಿದ್ದಾರೆ, ಈ ಅಂಶವನ್ನು ಅವರಿಗೆ ಮನದಟ್ಟು ಮಾಡಿರಿ.
2. ನಿಮ್ಮ ಮಗುವಿಗೆ ಸರಿಯಾದ ದಿನಚರಿ (ಟೈಮ್ ಟೇಬಲ್) ರೂಪಿಸಿಕೊಳ್ಳಲು ಸಹಕರಿಸಿ. ಅವರದ್ದೇ ಆದ ಸ್ವಂತ ಅಧ್ಯಯನ ಯೋಜನೆಯನ್ನು ರೂಪಿಸಿಕೊಳ್ಳಲಿ. ನೀವು ಕೇವಲ ಮಾರ್ಗದರ್ಶಕರಾಗಿರಿ.
3. ಓದಲು ಅನುಕೂಲವಾದ, ಶಾಂತ ವಾತಾವರಣವನ್ನು ಸೃಷ್ಟಿಸಿರಿ. ಮನೆಯಲ್ಲಿ ಪರೀಕ್ಷಾ ಸಮಯದಲ್ಲಿ ಕೂಗಾಟ ಕಿರುಚಾಟ, ಗಲಾಟೆ ಆಗದಂತೆ ನಿಗಾವಹಿಸಿ.
4. ಓದುವುದರ ನಡುವೆ ವಿರಾಮವಿದ್ದರೆ ಒಳಿತು. ಅಂತ ಸಮಯದಲ್ಲಿ ನೀವು ಅವರನ್ನು ಪ್ರೀತಿಯಿಂದ ಮಾತನಾಡಿಸಿ. ಅವರಿಗೆ ಇಷ್ಟವಾದ ತಿಂಡಿ ತಿನಿಸು ಮಾಡಿಕೊಡಿ. (ಪಥ್ಯದ ಮಿತಿಯಲ್ಲಿ) ತಂದೆ ತಾಯಿ ತನ್ನ ಬಗ್ಗೆ ಕಾಳಜಿ ತೋರಿಸುತ್ತಿದ್ದಾರೆ ಎಂಬ ಭಾವ ಅವರಲ್ಲಿ ಬಲಿಯಲಿ.
5. ನಿಮ್ಮ ಮಗುವನ್ನು ಎಂದೂ ಅದರ ಅಣ್ಣ ಅಕ್ಕ ಅಥವಾ ನೆರೆ ಹೊರೆಯ ಮಕ್ಕಳೊಂದಿಗೆ ಹೋಲಿಸಿ ಹೀಗೆಳೆಯಬೇಡಿ ಅದರಿಂದ ಅದರ ಮನಸ್ಸು ಮುದುಡಿ, ಕೀಳರಿಮೆ ಹೆಚ್ಚಾಗುತ್ತದೆ.
6. ಪರೀಕ್ಷೆ ಸಮಯದಲ್ಲಿ ಮಗುವಿನ ಮೇಲೆ ಇಂತಿಷ್ಟೇ ಸಮಯ ಓದು. ಇದನ್ನೇ ಓದು ಎಂದು ತುಂಬಾ ನಿಯಮಗಳನ್ನು ಹೇರಬೇಡಿ. ಅದಕ್ಕೂ ಸ್ವಲ್ಪ ಸ್ವಾತಂತ್ರ್ಯ ಕೊಡಿ. ಕೇವಲ ಅಂಗುಲಿ ನಿರ್ದೇಶನ ಮಾಡಿರಿ.
7. ನಿಮ್ಮ ಮಕ್ಕಳ ಆಹಾರ ಕ್ರಮದಲ್ಲಿ ಪಥ್ಯವಿರಲಿ. ಕರಿದಪದಾರ್ಥ, ತಂಗಳು, ಹೊರಗಿನ ತಿಂಡಿ ಮುಂತಾದವನ್ನು ವರ್ಜಿಸಿ. ಮನೆ ಊಟ, ಹಸಿ ಮೊಳಕೆ ಕಾಳು, ತರಕಾರಿ ಇತ್ಯಾದಿ ಉತ್ತಮ.
8. ಪರೀಕ್ಷೆ ಮುಗಿದನಂತರ ನಿಮ್ಮ ಮಕ್ಕಳನ್ನು ಎಲ್ಲಾದರೂ ಪ್ರವಾಸ ಕರೆದುಕೊಂಡು ಹೋಗುವ ಯೋಜನೆ ಮಾಡಿರಿ. ಆಗ ಅವರಿಗೆ ಖುಷಿಯಾಗಿ ಮನಸ್ಸೂ ಪ್ರಫುಲ್ಲಿತವಾಗುತ್ತದೆ. ●

## ಸಂಕಲ್ಪ ದಿನ

ದಿನಾಂಕ 23–1–2013ರ ಬುಧವಾರದಂದು, ನಮ್ಮ ಸಂಘದ ಉತ್ತರ ಜಿಲ್ಲೆಯ ಘಟಕವು ಸ್ವಾಮಿವಿವೇಕಾನಂದರ 150ನೇ ಜಯಂತಿ ಮತ್ತು ಸುಭಾಷಚಂದ್ರ ಬೋಸರ ಜಯಂತಿ ಪ್ರಯುಕ್ತ ಜಿಲ್ಲಾ ಶಿಕ್ಷಕರಿಗೆ ಸಂಕಲ್ಪ ದಿನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಕ್ಷಿಣ ಜಿಲ್ಲಾ ಘಟಕದ ಕಾರ್ಯದರ್ಶಿ ವಿ. ರಾಜರವರು ಈ ಎರಡು ಮಹಾಚೇತನಗಳು ಅನೇಕ ರಾಷ್ಟ್ರಭಕ್ತರನ್ನು ನಿರ್ಮಿಸಿತು ಎಂದರು. ಹಾಗೆಯೇ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರಜ್ಞೆ, ರಾಷ್ಟ್ರಭಕ್ತಿಗಳನ್ನು ಬೆಳಸಬೇಕೆಂದರು.

ಸಂಘದ ಉತ್ತರ ಜಿಲ್ಲಾ ಅಧ್ಯಕ್ಷ ಜೆ.ಎಂ. ಜೋಶಿಯವರು ಶಿಕ್ಷಕರಿಗೆ ಸಂಕಲ್ಪ ಬೋಧನೆ ಮಾಡಿದರು. ಶಿವಕುಮಾರಸ್ವಾಮಿಯವರು ಎಲ್ಲರನ್ನು ವಂದಿಸಿದರು. ಈ ಕಾರ್ಯಕ್ರಮವನ್ನು ಬೆಂಗಳೂರಿನ ಕೊಡಿಗೆಹಳ್ಳಿಯ ಸೇಂಟ್‌ಮೇರಿಸ್ ಶಾಲೆಯಲ್ಲಿ ಏರ್ಪಡಿಸಲಾಗಿತ್ತು. (ಚಿತ್ರ – ಪುಟ 11 ರಲ್ಲಿ)

# ಇಂದಿನ ಶಾಲಾಕಾಲೇಜಿನ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಹಿತವಚನ

ಸ್ವಾಮಿ ರಾಘವೇಶಾನಂದ

**ಸ್ವಾಮಿ ವಿವೇಕಾನಂದರು ಯುವಜನತೆಗೆ, ಅದರಲ್ಲೂ, ವಿದ್ಯಾರ್ಥಿಗಳಿಗೆ ನೀಡಿರುವ ಬೋಧನೆಗಳು ಅಮೂಲ್ಯವಾದವು. ಅವು ಲಕ್ಷಾಂತರ ವಿದ್ಯಾರ್ಥಿಗಳ ಜೀವನವನ್ನು ರೂಪಿಸುತ್ತಿವೆ. ಅವುಗಳ ಸ್ಥೂಲ ಪರಿಚಯ ನಮ್ಮ ವಿದ್ಯಾರ್ಥಿಗಳಿಗೆ ಅತ್ಯವಶ್ಯ. ಇದನ್ನು ಸ್ವಾರಸ್ಯಕರವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.**

ಶಿಕ್ಷಣ ಎಂದರೇನು ? ಶಿಕ್ಷಣ ಅಥವಾ ವಿದ್ಯಾಭ್ಯಾಸದ ಗುರಿ ಏನಾಗಿರಬೇಕು ? ಎಂತಹ ಶಿಕ್ಷಣ ವ್ಯವಸ್ಥೆ ಸಮರ್ಪಕ ಎಂದೆನಿಸಿಕೊಳ್ಳುತ್ತದೆ ? ಇಂತಹ ಪ್ರಶ್ನೆಗಳಿಗೆ ಸ್ವಾಮಿ ವಿವೇಕಾನಂದರ ಬಳಿ ನಿಖರವಾದ ಉತ್ತರವನ್ನು ಕಾಣಬಹುದು. ಸ್ವಾಮೀಜಿಯವರ ಜೀವನಚರಿತ್ರೆಯನ್ನು ಓದುವುದರ ಮೂಲಕ, 'ಸರಿಯಾದ ವಿದ್ಯಾಭ್ಯಾಸ ಹೇಗಿರಬೇಕು?' ಎಂದು ನಾವು ತಿಳಿಯಬಹುದು.

ಸ್ವಾಮೀಜಿ ಹೇಳುತ್ತಾರೆ. "ಬರೀ ಪುಸ್ತಕಗಳನ್ನು ಓದುವುದು, ಕಂಠಪಾಠ ಮಾಡಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು, ಅನೇಕ ವಿಷಯಗಳ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸುವುದು – ಇವು ಶಿಕ್ಷಣ ಎಂದು ಅನಿಸಿಕೊಳ್ಳುವುದಿಲ್ಲ. ಆದರೆ ಒಳ್ಳೆಯ ಚಾರಿತ್ರ್ಯ ನಿರ್ಮಾಣ ಮಾಡಬಲ್ಲಂತಹ, ಮಾನಸಿಕ ಶಕ್ತಿಯನ್ನು ಹೆಚ್ಚಿಸಬಲ್ಲಂತಹ, ಸತ್ಪ್ರಜೆಗಳನ್ನು ನಿರ್ಮಾಣ ಮಾಡಬಲ್ಲಂತಹ, ರಾಷ್ಟ್ರಾಭಿವೃದ್ಧಿಗೆ – ಪುನರುಜ್ಜೀವನಕ್ಕೆ ನಾಂದಿಯಾಗ ಬಲ್ಲಂತಹ ಮಾಧ್ಯಮವೇ ಶಿಕ್ಷಣ."

ಮೇಲೆ ಹೇಳಿದ ಶಿಕ್ಷಣ ಕುರಿತಾದ ಸ್ವಾಮೀಜಿಯವರ ಮಾನದಂಡಗಳು ಇಂದಿನ ಸಮಾಜದಲ್ಲಿ ಎಷ್ಟು ಪ್ರಸ್ತುತ ನೋಡಿ ! ಆದರೆ ಅವು ಪ್ರಚಲಿತದಲ್ಲಿ ಇವೆಯೇ? ಇದ್ದರೆ ಅದರಿಂದ ಸಮಾಜಕ್ಕಾಗುವ ಒಳಿತಾದರೂ ಏನು ? ಇಂತಹ ಶಿಕ್ಷಣ ಪದ್ಧತಿ ಇಲ್ಲದಿದ್ದರೆ ಅದನ್ನು ಜಾರಿಗೆ ತರುವುದು ಹೇಗೆ ? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅವಶ್ಯ. ಇಂದಿನ ಶಿಕ್ಷಣಪದ್ಧತಿಯನ್ನು ಪರಿಶೀಲಿಸಿದರೆ, ಸ್ವಾಮೀಜಿಯವರ 'ಶಿಕ್ಷಣ ವಿನ್ಯಾಸ' ಅದರಲ್ಲಿ ಕಂಡು ಬರುವುದಿಲ್ಲ. ನಾವೆಲ್ಲ ಸಹಜವಾಗಿ ಮಾಡುವುದು ಏನು ? ಪಠ್ಯ ವಿಷಯಗಳನ್ನು ಕಂಠಪಾಠ ಮಾಡಿ, ಅವುಗಳನ್ನು ಪರೀಕ್ಷೆಗಳಲ್ಲಿ ಬರೆದು, ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದಿನ ತರಗತಿಗೆ ಹೋಗಿ ಹಿಂದೆ ಕಲಿತದ್ದನ್ನೆಲ್ಲಾ ಮರೆಯುತ್ತೇವೆ. ಹೀಗೆ ವರ್ಷ, ವರ್ಷ ಕಲಿತು ಪಡೆದದ್ದೇನನ್ನು ? ಒಂದು ಡಿಗ್ರಿ ಸರ್ಟಿಫಿಕೇಟ್. ಇಂತಹ ಒಣ ಸರ್ಟಿಫಿಕೇಟ್ ಪಡೆದು ಎಷ್ಟೋ ಯುವಕ ಯುವತಿಯರ ಸ್ಥಿತಿ ಶೋಚನೀಯವಾಗಿದೆ. ಕಾರಣ, ಕೈಯಲ್ಲಿ ಸರ್ಟಿಫಿಕೇಟ್ ಇದ್ದರೂ ತಲೆಯಲ್ಲಿ ಸತ್ವವಿಲ್ಲ. ಮತ್ತೊಂದು ಕಾರಣವೇನೆಂದರೆ ಸಮರ್ಪಕವಾದ, ಸರ್ವತೋಮುಖವಾದ ವ್ಯಕ್ತಿತ್ವವನ್ನ ನಿರ್ಮಾಣ ಮಾಡಬಲ್ಲಂತಹ ಒಳ್ಳೆಯ ಸುಸಜ್ಜಿತ ಶಿಕ್ಷಣದ ಮಾದರಿ ನಮ್ಮಲ್ಲಿ ಇಲ್ಲದಿರುವುದು.

ಸರಿ, ಇಂತಹ ಕಠಿಣ ಪರಿಸ್ಥಿತಿಯಿಂದ ಪಾರಾಗುವುದು ಹೇಗೆ ? ಏನನ್ನು ಮಾಡಿದರೆ ಒಳ್ಳೆಯದು ಎಂದು ನಾವು ಈಗ ವಿವೇಚಿಸಬೇಕು.

ಮೊದಲನೆಯದಾಗಿ ಸ್ವಾಮೀಜಿ ಹೇಳುತ್ತಾರೆ. ಶಿಕ್ಷಣದ ಮೂಲಕ ನಾವು ವಿದ್ಯಾರ್ಥಿಗಳಿಗೆ ಸಕಾರಾತ್ಮಕ ವಿಷಯಗಳನ್ನು ತಿಳಿಸಿ ಅವರನ್ನು ಶಕ್ತಿಶಾಲಿಗಳನ್ನಾಗಿ ಮಾಡಬೇಕೇ ಹೊರತು, ನಕಾರಾತ್ಮಕವಾದ ವಿಷಯಗಳನ್ನಲ್ಲ. ಉದಾಹರಣೆಗೆ ಒಬ್ಬ ಹುಡುಗ ಸರಿಯಾಗಿ ಓದಲಿಲ್ಲ ಎಂದುಕೊಳ್ಳೋಣ. ಆಗ ಅವನ ಸುತ್ತ ಎಲ್ಲರೂ, "ನೀನು ಯಾವುದಕ್ಕೂ ಲಾಯಕ್ಕಿಲ್ಲ. Simply Waste" ಎಂದು ಹೇಳಿ ಅವನ ಆತ್ಮವಿಶ್ವಾಸವನ್ನು ಕುಗ್ಗಿಸಿದರೆ ಅವನಲ್ಲಿ ಅದು ಕೆಟ್ಟ ಪರಿಣಾಮವನ್ನೇ ಬೀರುತ್ತದೆ. ತರಗತಿಯಲ್ಲಿ ಸರಿಯಾಗಿ ಓದದಿದ್ದರೆ ಮಕ್ಕಳು ದಡ್ಡರೆಂಬುದು ತಪ್ಪು ಕಲ್ಪನೆ. ಉದಾಹರಣೆಗೆ, ಒಬ್ಬ ಹಿರಿಯ ಗಣಿತ ಮೇಧಾವಿಯ ಜೀವನವನ್ನೇ ನೋಡೋಣ. ಈತ ತಮಿಳುನಾಡಿನ ಈರೋಡ್ ಎಂಬಲ್ಲಿ ಒಂದು ಕಡು ಬಡ ಕುಟುಂಬವೊಂದರಲ್ಲಿ ಜನಿಸಿದರು. ಆರ್ಥಿಕವಾಗಿ ದುರ್ಬಲ ವಾಗಿದ್ದ ಕುಟುಂಬ ಅವರದ್ದು. ಬಹು ಕಷ್ಟದಿಂದಲೇ ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದರು. ಬಾಲ್ಯದಿಂದಲೇ ಅವರಿಗೆ ಗಣಿತವೆಂದರೆ ಹುಚ್ಚು. ಚಿಕ್ಕ ವಯಸ್ಸಿನಲ್ಲಿಯೇ ಗಣಿತದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದರು. ಇವರಿಗೆ ಮದ್ರಾಸ್ ವಿಶ್ವವಿದ್ಯಾನಿಲಯವನ್ನು ಸೇರಿಕೊಂಡು ಗಣಿತದಲ್ಲಿ ಸಂಶೋಧನೆ ಮಾಡಬೇಕೆಂಬ ಹಂಬಲವಿತ್ತು. ಆದರೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ಸಿಗಬೇಕಿದ್ದರೆ F.A. Examination ನಲ್ಲಿ ಪಾಸ್ ಆಗಬೇಕಿತ್ತು. ಗಣಿತವೇನೋ

(ಪುಟ 9ಕ್ಕೆ....)

8ನೇ ಪುಟದಿಂದ..... **ವಿದ್ಯಾರ್ಥಿಗಳಿಗೆ ಹಿತವಚನ...**

ಇವರಿಗೆ ಆಟ. ಆದರೆ ಉಳಿದ Subjects ಎಲ್ಲ ಕಾಟ. F.A. Examination ನಲ್ಲಿ ಫೇಲ್ ಆದರು. ಹೀಗಾಗಿ ವಿಶ್ವವಿದ್ಯಾನಿಲಯದ ಕನಸು ಕನಸೇ ಆಯಿತು.

ಜೀವನೋಪಾಯಕ್ಕೆ ಒಂದು ಕೆಲಸ ಹುಡುಕಿದರು. ಬಡತನ, ಕುಟುಂಬವನ್ನು ಕಾಪಾಡುವ ಭಾರ, ಕೆಲಸದ ಒತ್ತಡ – ಇವೆಲ್ಲದರ ಮಧ್ಯೆಯೂ ಗಣಿತ ಸಂಶೋಧನೆ ಮುಂದುವರೆಯುತ್ತಿತ್ತು. ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದು ಅವುಗಳನ್ನು ಇಂಗ್ಲೆಂಡಿನಲ್ಲಿ ಇದ್ದ ಪ್ರೊ. ಹಾರ್ಡಿ ಎಂಬುವವರಿಗೆ ಕಳುಹಿಸುತ್ತಿದ್ದರು. ಇವನ್ನೆಲ್ಲ ಓದಿದ್ದ ಪ್ರೊ. ಹಾರ್ಡಿ, "ಈತ ಸಾಧರಣನಲ್ಲ. ಮಹಾ ಮೇಧಾವಿ" ಎಂದು ನಿರ್ಧರಿಸಿ, ಅವರನ್ನು ಲಂಡನ್ನಿಗೆ ಕರೆಸಿಕೊಂಡರು. ಅವರಿಂದ ಅನೇಕ ರೀತಿಯ ಗಣಿತ ಜ್ಞಾನವನ್ನು ಪಡೆದು, ಭಾರತಕ್ಕೆ ವಾಪಸ್ಸು ಕಳಿಸಿಕೊಟ್ಟರು. ಇವರೇ ಗಣಿತ ಮೇಧಾವಿ ಶ್ರೀನಿವಾಸ ರಾಮಾನುಜಂ. ಚೆನ್ನೈ ವಿಶ್ವವಿದ್ಯಾನಿಲಯ ಇವರನ್ನು ತಿರಸ್ಕರಿಸಿದರೂ ಇವರು ಕುಗ್ಗಲಿಲ್ಲ. ಲಂಡನ್ನಿನ ಜ್ಞಾನದೇಗಲುದ ಬಾಗಿಲು ಇವರನ್ನು ಸ್ವಾಗತಿಸಿತು. ಇವರ ಮೇಧಾಶಕ್ತಿಯನ್ನು ಗುರುತಿಸದೇ ಇದ್ದದ್ದು ನಮ್ಮ ಶಿಕ್ಷಣ ಪದ್ಧತಿಯ ಲೋಪವೋ, ಏನೋ ? ಆದರೆ ರಾಮಾನುಜಂ ಮೊದಲೇ ಬೆಳಕಿಗೆ ಬಂದಿದ್ದರೆ ಗಣಿತ ಶಾಸ್ತ್ರದಲ್ಲಿನ್ನೂ ಹೊಸ ಶಾಸ್ತ್ರಜ್ಞಾನ ಮೂಡುತ್ತಿದುದ್ದರಲ್ಲಿ ಸಂದೇಹವಿರಲಿಲ್ಲ. ರಾಮಾನುಜಂರವರ ಜೀವನದಂತೆ ಹಲವಾರು ಉದಾಹರಣೆಗಳನ್ನು ಇನ್ನೂ ಇತರ ಮಹಾತ್ಮರ ಜೀವನದಲ್ಲಿ ಕಾಣಬಹುದು.

ಇದರಂತೆಯೇ ಇರುವ ಒಂದು ಅದ್ಭುತವನ್ನು ಥಾಮಸ್ ಆಲ್ವಾ ಎಡಿಸನ್‌ನ ಜೀವನದಲ್ಲಿ ಕಾಣಬಹುದು. ಆತ ಜಗತ್ತಿನ ಅತಿ ಹಿರಿಯ ವಿಜ್ಞಾನಿ, ಅನ್ವೇಷಕ. ಬಾಲಕನಾಗಿದ್ದಾಗ ಅವನು ಬುದ್ಧಿವಂತ ಹುಡುಗನಲ್ಲ ಎಂದು ಶಾಲೆಯವರು ಅವನನ್ನು ಹೊರದೂಡಿದರು. ಅವನ ತಾಯಿ ಶಾಲೆಯವರಿಗೆ, "ನಾನು ಇವನನ್ನು ಜಗತ್ತೇ ಮರೆಯದ ವ್ಯಕ್ತಿಯನ್ನಾಗಿ ಮಾಡುತ್ತೇನೆ" ಎಂದು ಹೇಳಿದಳು. ಅಂದಿನಿಂದ ತಾಯಿಯೇ ಮಗನಿಗೆ ವಿದ್ಯೆಯನ್ನು ಕಲಿಸಿದಳು. ಜಗತ್ತೇ ಬೆರಗಾಗುವ ಹಿರಿಯ ವಿಜ್ಞಾನಿಯನ್ನಾಗಿ ಅವನನ್ನು ರೂಪಿಸಿದಳು. ಜಗತ್ತೇ ತಲೆಬಾಗಿತು, ಅವನ ಜ್ಞಾನಕ್ಕೆ. ಎಂತಹ ಅದ್ಭುತ ನೋಡಿ !

ಒಬ್ಬಾತ ಎಡಿಸನ್ ಬಳಿ ಬಂದ. "ನೀವು ಯಾರಿಂದಲೂ ಪಾಠ ಕಲಿಯದೆ ಸ್ವಪರಿಶ್ರಮದಿಂದ ಶ್ರೇಷ್ಠ ವಿಜ್ಞಾನಿಯಾದಂತೆ, ನಾನೂ ಆಗಬೇಕೆಂದಿರುವೆ. ನನಗೆ ಏನಾದರೂ ಸಲಹೆ ನೋಡಿ" ಎಂದು ಕೇಳಿದ. ಅದಕ್ಕೆ ಅವರು, "ನನ್ನ ತಾಯಿ ಹೇಳಿಕೊಟ್ಟ ಒಂದು ಮಂತ್ರವನ್ನು ನಿನಗೆ ಹೇಳಿಕೊಡುತ್ತೇನೆ. ಅದೇನೆಂದರೆ ಶ್ರೇಷ್ಠ ವ್ಯಕ್ತಿಯಾಗಬೇಕಾದರೆ ಗಡಿಯಾರವನ್ನು ನೋಡಿ ಕೆಲಸ ಮಾಡಬೇಡ" ಎಂದರು.

ಅದರ ಅರ್ಥ ಏನು ? ಗಡಿಯಾರ ಮರೆಯುವುದು ಎಂದರೆ ಯಾವ ಕೆಲಸವನ್ನು ಯಾವಾಗ ಬೇಕಾದಲ್ಲಿ, ಎಷ್ಟು ಹೊತ್ತು ಬೇಕಾದರೂ ಮಾಡುವುದೆಂದರ್ಥವಲ್ಲ. ಸಮಯವನ್ನು ಮರೆತು ದುಡಿಮೆಯಲ್ಲಿ ಬೆರೆಯಬೇಕು. ಉದಾಹರಣೆಗೆ ಬರೀ ಟಿ. ವಿ. ನೋಡುವ ಚಾಳಿ ಬೆಳೆಸಿ ಕೊಂಡಿರುವವನು ಎಲ್ಲಿ ಟಿ. ವಿ. ಇದ್ದರೆ ಅಲ್ಲೇ ನೋಡುತ್ತಾ ನಿಂತು ಬಿಡುತ್ತಾನೆ. ಅದರಂತೆ ನೀವೆಲ್ಲಾ ಯಶಸ್ವೀ ವಿದ್ಯಾರ್ಥಿಗಳಾದಲ್ಲಿ ಸಮಯ ದೊರೆತಾಗಲೆಲ್ಲ ಒಳ್ಳೆಯ ಗ್ರಂಥಗಳನ್ನು ಅಧ್ಯಯನ ಮಾಡುವುದಕ್ಕೆ ಬಳಸಬೇಕೇ ಹೊರತು ಸಮಯವನ್ನು ಹಾಳು ಮಾಡಬಾರದು.

ರಾಮಾನುಜಂ ಅವರ ಜೀವನವನ್ನು ನೋಡಿದ ಮೇಲೆ ನಿಮ್ಮೆಲರಲ್ಲಿಯೂ ಅದಮ್ಯವಾದ ಆತ್ಮವಿಶ್ವಾಸ ಚಿಮ್ಮಬೇಕು. ಎಂತಹ ಕಠಿಣ ಘಳಿಗೆಯಲ್ಲಿಯೂ ಕುಗ್ಗದ ಉತ್ಸಾಹ ಇರಬೇಕು. ಈ ಗುಣಗಳನ್ನು ಹೇಗೆ ಸಂಪಾದಿಸುವುದು ? ಇವೆಲ್ಲವನ್ನೂ ಪಠ್ಯವಿಷಯಗಳು ಅಲ್ಲಲ್ಲಿ ಸಂಕ್ಷಿಪ್ತವಾಗಿ ಹೇಳುತ್ತವೆ, ನಿಜ. ಆದರೆ, ನೀವೆಲ್ಲರೂ ಸ್ವಾಮಿ ವಿವೇಕಾನಂದರ ಜೀವನವನ್ನು ಚೆನ್ನಾಗಿ ಓದಬೇಕು. ಸ್ವಾಮೀಜಿಯವರ ಜೀವನ ಸ್ಫೂರ್ತಿಯ ಮೂರ್ತಸ್ವರೂಪ. ಸ್ವಾಮೀಜಿಯವರ ಸಂದೇಶದ ಸಾರವೇನೆಂದರೆ 'ಶಕ್ತಿಯೇ ಜೀವನ, ದುರ್ಬಲತೆಯೇ ಮರಣ'. ಸ್ವಾಮೀಜಿ ಹೇಳುತ್ತಾರೆ, "ನಿಮ್ಮಲ್ಲಿ ಅಪ್ರತಿಮವಾದ ಮಹಾನ್ ಶಕ್ತಿ ಸುಪ್ತವಾಗಿದೆ. ಈ ಅಪಾರ ಶಕ್ತಿಯಿಂದ ಏನನ್ನು ಬೇಕಾದರೂ ಸಾಧಿಸಬಹುದು" ಎಂದು. ಅವರು ಹೇಳುತ್ತಾರೆ. "ನಿನ್ನಿಂದ ಏನು ಬೇಕಾದರೂ ಮಾಡಲು ಸಾಧ್ಯ. 'ಸಾಧ್ಯವಾಗದು' ಎಂಬುದು ಏನೂ ಇಲ್ಲ" ಎಂದು. ವಿದ್ಯುತ್ತಿನ ಹಾಗೆ ಪ್ರವಹಿಸುವ ಇಂತಹ ವೀರವಾಣಿ ಎಂತಹ ಕುರಿಯಂತೆ ಇರುವವನನ್ನೂ ಸಿಂಹದ ಮರಿಯ ಹಾಗೆ ಇರುವ ಧೀರವ್ಯಕ್ತಿಯನ್ನಾಗಿಸಬಲ್ಲದು. ಹೀಗಾಗಿ ಸ್ವಾಮಿ ವಿವೇಕಾನಂದರ ನುಡಿಗಳು ನಿಮ್ಮೆಲ್ಲರಿಗೂ ಅದಮ್ಯವಾದ ಶಕ್ತಿಯನ್ನೂ ಧೈರ್ಯವನ್ನೂ ತುಂಬುವಲ್ಲಿ ಸಂಶಯವೇ ಇಲ್ಲ.

ಎರಡನೆಯದಾಗಿ ಸ್ವಾಮೀಜಿ ಹೇಳುತ್ತಾರೆ. ಶಿಕ್ಷಣದ ಅಥವಾ ವಿದ್ಯಾಭ್ಯಾಸದ ಗುರಿ ಏಕಾಗ್ರತಾಶಕ್ತಿಯನ್ನು ಹೆಚ್ಚಿಸುವುದಾಗಿರಬೇಕು ಎಂದು. ಏಕಾಗ್ರತೆಯೆಂದರೆ ಏನು ಎಂದು ನಿಮ್ಮೆಲ್ಲರಿಗೂ ಗೊತ್ತು. ಯಾವುದಾದರೂ ಒಂದು ವಿಷಯದಲ್ಲಿ ಸಂಪೂರ್ಣ ಮನಸ್ಸು ಲೀನವಾಗುವುದೇ ಏಕಾಗ್ರತೆ. ಇಂದಿನ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಬೆಳೆಸುವಲ್ಲಿ ಎಷ್ಟು ವಿಫಲವಾಗಿದೆ ಎಂದು ಬೇರೆ ಏನೂ ಹೇಳಬೇಕಿಲ್ಲ. ಇಂದಿನ ವಿದ್ಯಾರ್ಥಿಗಳು ಎದುರಿಸುವ ಬಹು ದೊಡ್ಡ ಸಮಸ್ಯೆಯೇ ಏಕಾಗ್ರತೆ ಇಲ್ಲ ಎನ್ನುವುದೇ, ಹಗಲೂ ರಾತ್ರಿ ಕಂಠಪಾಠ ಮಾಡಿ ಅಷ್ಟು ಇಷ್ಟು ಪರೀಕ್ಷೆಯಲ್ಲಿ ಬರೆದು, ಒಂದಿಷ್ಟು ಅಂಕಗಳಿಗೆ ತೃಪ್ತರಾಗುವುದು ನಮ್ಮ ವಿದ್ಯಾರ್ಥಿಗಳಿಗೆ ಸಹಜ ಅಭ್ಯಾಸ. ಒಂದು ಸ್ವಾರಸ್ಯವಾದ ಘಟನೆಯನ್ನು ಕೇಳಿ.

(ಪುಟ 10ಕ್ಕೆ....)

9ನೇ ಪುಟದಿಂದ..... **ವಿದ್ಯಾರ್ಥಿಗಳಿಗೆ ಹಿತವಚನ...**

ಆಗ 'ಏಕಾಗ್ರತೆಯ ಮಹತ್ವ' ನಿಮಗೆ ತಿಳಿಯುತ್ತದೆ. ಒಮ್ಮೆ ಸ್ವಾಮಿ ವಿವೇಕಾನಂದರು ತಮ್ಮ ಕೊಠಡಿಯಲ್ಲಿ ವಿಶ್ರಮಿಸುತ್ತಿದ್ದರು. ಆಗ ಒಬ್ಬ ಭಕ್ತ ಅವರಿಗೆ ಪ್ರಣಾಮ ಮಾಡಲು ಅವರ ಕೊಠಡಿಯೊಳಗೆ ಬಂದ. ಸ್ವಾಮೀಜಿಯವರಿಗೆ ಪ್ರಣಾಮ ಮಾಡಿ ಕೊಠಡಿಯ ಸುತ್ತ ಕಣ್ಣು ಹಾಯಿಸಿದ. ಒಂದು ಮೂಲೆಯಲ್ಲಿ Encyclopedia Britanica ದ (ಬ್ರಿಟಾನಿಕಾ ವಿಶ್ವಕೋಶ) ದೊಡ್ಡ ಸಂಪುಟಗಳನ್ನು ಸಾಲುಸಾಲಾಗಿ ಜೋಡಿಸಿದ್ದರು. ಇವನ್ನು ನೋಡಿದ ಭಕ್ತನಿಗೆ ದಿಗಿಲಾಯಿತು. ನಾವು ನೋಡಿದ್ದರೂ ನಮಗೂ ದಿಗಿಲಾಗುತ್ತಿತ್ತು. ಕಾರಣ ಅಷ್ಟು ದೊಡ್ಡ ಪುಸ್ತಕವನ್ನು ಓದುವುದಿರಲಿ, ಅದನ್ನು ತಲೆದಿಂಬಾಗಿಟ್ಟುಕೊಂಡು ಚೆನ್ನಾಗಿ ನಿದ್ರೆ ಮಾಡಬಹುದಾಗಿತ್ತು ಸರಿ, ಈ ಭಕ್ತ ಸ್ವಾಮೀಜಿಯವರನ್ನು ಹೇಳಿದ, "ಸ್ವಾಮೀಜಿ, ಯಾರಿಗಾದರೂ ಸರಿ, ಈ ಎಲ್ಲಾ ದೊಡ್ಡ ಗ್ರಂಥಗಳನ್ನು ತಮ್ಮ ಇಡೀ ಜೀವನದಲ್ಲಿ, ಒಮ್ಮೆಯಾದರೂ ಓದಲು ಸಾಧ್ಯವೇ ಇಲ್ಲ" ಎಂದು. ಅವನಿಗೇನು ಗೊತ್ತು. ಸ್ವಾಮಿ ವಿವೇಕಾನಂದರು ಅಸಾಧ್ಯವನ್ನು ಸಾಧಿಸಬಲ್ಲವರು. ಸಾಧಿಸಿ ತೋರಿಸಿದವರು ಎಂದು. ಸ್ವಾಮೀಜಿ ಹೀಗೆಂದರು, "ಏಕಷ್ಟು ಸಂದೇಹ, ಈಗಾಗಲೇ ನಾನು ಹಲವಾರು ಸಂಪುಟಗಳನ್ನು ಓದಿದ್ದೇನೆ. ಅವುಗಳಿಂದ ಯಾವ ಪ್ರಶ್ನೆ ಬೇಕಾದರೂ ಕೇಳು. ಅದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತೇನೆ" ಎಂದು. ಭಕ್ತ ಒಂದೊಂದೇ ಪ್ರಶ್ನೆಯನ್ನು ಕೇಳತೊಡಗಿದ. ಸೋಜಿಗವೇನೆಂದರೆ, ಸ್ವಾಮೀಜಿ ಪುಸ್ತಕದಲ್ಲಿರುವ ಅದೇ ಸಾಲುಗಳಿಂದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿದ್ದಲ್ಲದೆ ಅದೇ ಸಾಲಗಳನ್ನು ಹಾಗೆಯೇ ಉದಾಹರಿಸಲಾರಂಭಿಸಿದರು. ಭಕ್ತ ಅವಾಕ್ಕಾಗಿ ತೆರೆದ ಬಾಯನ್ನು ಮುಚ್ಚದೆ ಸ್ವಾಮೀಜಿಯವರನ್ನು ನೋಡುತ್ತ, "ಇದು ಹೇಗೆ ಸಾಧ್ಯ ಸ್ವಾಮೀಜಿ? ಸಾಧಾರಣ ಮನುಷ್ಯರಿಂದ ಇದು ಸಾಧ್ಯವಿಲ್ಲ. ನಿಮ್ಮಂತಹ ಮಹಾತ್ಮರಿಂದಲೇ ಸಾಧ್ಯ" ಎಂದು ಹೇಳಿದ. ಸ್ವಾಮೀಜಿ, "ಎಲ್ಲರಿಗೂ ಇದು ಸಾಧ್ಯ. ಏಕಾಗ್ರತಾ ಶಕ್ತಿ ಇದ್ದರೆ. ಈ ಶಕ್ತಿಯನ್ನು ಯಾರು ಬೇಕಾದರೂ ತಮ್ಮದಾಗಿಸಿಕೊಳ್ಳಬಹುದು. ನಿನಗೂ ಈ ಶಕ್ತಿ ಸಂಪಾದಿಸಲು ಸಾಧ್ಯ" ಎಂದರು.


ಈ ಸಂಗತಿಯಿಂದ ತಿಳಿಯುವುದು ಏನು ? ಶಿಕ್ಷಣ ಅಥವಾ ವಿದ್ಯಾರ್ಜನೆಯಿಂದ ಸಂಪಾದಿಸಬೇಕಾದ ಪ್ರಮುಖವಾದ ಕಲೆ ಏಕಾಗ್ರತೆ. ಅದನ್ನು ಸಂಪಾದಿಸುವುದು ಹೇಗೆ ? ಸ್ವಾಮೀಜಿ ಹೇಳುತ್ತಾರೆ. ಧ್ಯಾನವನ್ನು ಅಭ್ಯಾಸ ಮಾಡುವುದರ ಮೂಲಕ ಈ ಶಕ್ತಿ ಕಾಲಕ್ರಮೇಣ ದೊರಕುತ್ತದೆ ಎಂದು. 'ಧ್ಯಾನ'ವೆಂದು ಬರೆದ ಪಠ್ಯವಿಷಯ ಎಲ್ಲಿದೆ ? ಸರಿ, ಧ್ಯಾನ ಪಠ್ಯ ವಿಷಯದಲ್ಲಿ ಇಲ್ಲ. ಆದರೆ ಹಾಗೆಂದು ನಾವೂ ಸುಮ್ಮನಿದ್ದರೆ ನಷ್ಟ ಯಾರಿಗೆ ? ನಮಗೇ ಅಲ್ಲವೇ. ಆದ್ದರಿಂದ ದಿನವೂ ಧ್ಯಾನವನ್ನು ಮಾಡುವುದರಿಂದ ಏಕಾಗ್ರತೆ ಬೆಳೆಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಪಠ್ಯ ವಿಷಯದ ಬಲೆಯಿಂದ ಹೊರಬಂದು, ಇಂತಹ ಉತ್ತಮ ವಿಷಯಗಳನ್ನು ಅಭ್ಯಾಸ ಮಾಡಬೇಕು. ಅದರಿಂದ ಎಷ್ಟೋ ಒಳಿತಾಗುತ್ತದೆ.

ಇನ್ನೊಂದು ಪ್ರಮುಖ ವಿಷಯವನ್ನು ನಮ್ಮ ವಿದ್ಯಾರ್ಥಿಗಳು ಗಮನಿಸಬೇಕು. ಅದೇನೆಂದರೆ ವಿದ್ಯೆಯ ಜೊತೆಗೆ ಒಳ್ಳೆಯ ಚಾರಿತ್ರ್ಯವನ್ನೂ ಬೆಳೆಸಿಕೊಳ್ಳಬೇಕು. ಚಾರಿತ್ರ್ಯವಿಲ್ಲದೆ ಬರೀ ವಿದ್ಯೆ ಇದ್ದರೆ, ಸಮಾಜದಲ್ಲಿ ಯಾವುದೇ ಮನ್ನಣೆ ದೊರೆಯುವುದಿಲ್ಲ. ಮೇಲಾಗಿ, ಎಷ್ಟೇ ವಿದ್ಯೆ ಪಡೆದರೂ ಒಳ್ಳೆಯ ಚಾರಿತ್ರ್ಯವಿಲ್ಲದವರು ಸಮಾಜಕ್ಕೆ, ದೇಶಕ್ಕೆ ಹೊರೆಯಾಗುತ್ತಾರೆ. ಇಂತಹ ಅನೇಕ ದೃಷ್ಟಾಂತಗಳನ್ನು ನಮ್ಮ ದೇಶದಲ್ಲಿ ಕಾಣಬಹುದು. ಆದ್ದರಿಂದ ವಿದ್ಯೆಯ ಜೊತೆ ಜೊತೆಗೆ, ಒಳ್ಳೆಯ ಮೌಲ್ಯಗಳನ್ನೂ ಬೆಳೆಸಿಕೊಳ್ಳಬೇಕು. ಅದು ಹೇಗೆ ಸಾಧ್ಯ ? ಪಠ್ಯ ವಿಷಯಗಳ ನಡುನಡುವೆ, ಪಠ್ಯ ವಿಷಯಗಳು ನಮಗೆ ನೀಡುವ ಸಂದೇಶವನ್ನು ಗಮನಿಸಿ ಅವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಇದು ಹೇಗೆ ಸಾಧ್ಯ ? ಪ್ರತಿದಿನ ನಾವು ಹೊಸದೇನನ್ನು ಕಲಿತೆವು ? ಅದು ಎಷ್ಟರಮಟ್ಟಿಗೆ ನಮಗೆ ಒಳಿತಾಗುತ್ತದೆ ? ಎಂಬುದನ್ನು ಪಟ್ಟಿ ಮಾಡಬೇಕು. ಅವುಗಳಲ್ಲಿ ನಮಗೆ ಸೂಕ್ತವಾದ ಒಂದು ಒಳ್ಳೆಯ ವಿಷಯವನ್ನು ನಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂದು ಯೋಚಿಸಿ ನಡೆದುಕೊಳ್ಳಬೇಕು.

ಸತ್ಯವನ್ನೇ ನುಡಿಯುವುದು, ಗುರು-ಹಿರಿಯರಲ್ಲಿ ಭಕ್ತಿ, ನಿಷ್ಠೆಯಿಂದ ಕೆಲಸವನ್ನು ಮಾಡುವುದು – ಹೀಗೆ ಒಳ್ಳೆಯ ಸಂಗತಿಗಳಿದ್ದರೆ ವಿದ್ಯಾರ್ಥಿ ಗಳಿಸುವ ವಿದ್ಯೆಗೆ ಇನ್ನಷ್ಟು ಮೆರುಗು ದೊರೆಯುತ್ತದೆ.

ಹೀಗೆ ಸ್ವಾಮಿ ವಿವೇಕಾನಂದರು ವಿದ್ಯಾರ್ಥಿಗಳಿಗೆ, ಅವರ ಒಳಿತಿಗೆ ಏನು ಬೇಕೋ ಎಲ್ಲವನ್ನೂ ನೀಡುವ ದಾರಿದೀಪವಾಗಿ ಬೆಳಗುತ್ತಾರೆ.

**ಕೃಪೆ : ವಿವೇಕಪ್ರಭ**



## ಕಂಬನಿ

**ದಿವಂಗತ ದೇವರಾಜ್, ಮೈಸೂರು ಜಿಲ್ಲೆಯ ನಮ್ಮ ಸಂಘದ ಖಜಾಂಚಿಯಾಗಿದ್ದು, ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದವರು ಮೈಸೂರಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಹಲವು ವರ್ಷ ಸೇವೆ ಸಲ್ಲಿಸಿ, ಇತ್ತೀಚೆಗಷ್ಟೇ ನಿವೃತ್ತರಾಗಿದ್ದರು. ದುರ್ವಿಧಿ ಅವರನ್ನು ಕ್ಯಾನ್ಸರ್ ರೂಪದಲ್ಲಿ ಕಾಡಿ ದಿನಾಂಕ 30.01.2013 ರಂದು ಬಲಿತೆಗೆದುಕೊಂಡಿತು. ಅವರ ನಿಧನವು ಕೇವಲ ಕುಟುಂಬ ವರ್ಗಕ್ಕಷ್ಟೇ ಅಲ್ಲದೇ, ಮಾಧ್ಯಮಿಕ ಶಿಕ್ಷಕ ಸಂಘಕ್ಕೂ ತುಂಬಲಾರದ ನಷ್ಟವನ್ನುಂಟುಮಾಡಿದೆ. ಶಿಕ್ಷಕ ಸಮಾಚಾರವು ಅವರ ನಿಧನಕ್ಕೆ ಶೋಕವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಸದ್ಗತಿ ಪ್ರಾಪ್ತವಾಗಲೆಂದು ಪರಮೇಶ್ವರನಲ್ಲಿ ಪ್ರಾರ್ಥಿಸುತ್ತದೆ.**

## ವಿವೇಕಾನಂದರ ದೃಷ್ಟಿಯಂತೆ ಇದೆಯೇ ನಮ್ಮ ಶಿಕ್ಷಣ

ಚಿತ್ರ ವರದಿ



ಮಹಿಳಾ ವಿಚಾರ ಸಂಕಿರಣದಲ್ಲಿ ತುಮಕೂರಿನ ರಾಮಕೃಷ್ಣ ಮಠದ ಶ್ರೀ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡುತ್ತಿರುವುದು



ಸಮಾರಂಭದಲ್ಲಿ ಉಪಸ್ಥಿತ ಗಣ್ಯರು



ಸಮಾರಂಭದಲ್ಲಿ ಪಾಲ್ಗೊಂಡ ಸಭಿಕರು

## ಸಂಕಲ್ಪ ದಿನ

ಚಿತ್ರ ವರದಿ



ಸಂಕಲ್ಪ ದಿನದಂದು ಕಾರ್ಯಕ್ರಮದ ಅಧ್ಯಕ್ಷ ಶ್ರೀ. ಕನರಹರಿಯವರು ಅಧ್ಯಕ್ಷೀಯ ಭಾಷಣ ಮಾಡುತ್ತಿರುವುದು



ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀ ನಾಗರಾಜುರವರು ಸಭಿಕರನ್ನು ಸ್ವಾಗತಿಸುತ್ತಿರುವುದು



ಭಾಗವಹಿಸಿದ ಶಿಕ್ಷಕರು

# ನೋಡಿ ಮೋದಿ ಮಾಡಿದ ಮೋಡಿ



ಫೆಬ್ರವರಿ ಆರು ಬುಧವಾರ. ಸ್ಥಳ ದೆಹಲಿಯ ಪ್ರಸಿದ್ದ ಶ್ರೀರಾಮ ಕಾಲೇಜ್ ಆಫ್ ಕಾಮರ್ಸ್. 1800 ತರುಣ ವಿದ್ಯಾರ್ಥಿಗಳು, ಅನೇಕ ಮಂದಿ ಅಧ್ಯಾಪಕರು. ಅಂದು ಮೋದಿ ಎಳೆಯ ಹೃದಯಗಳಿಗೆ ಮಾರಿದ್ದು, ಭವಿಷ್ಯದ ಕನಸುಗಳನ್ನು. ಸುಮಾರು 80 ನಿಮಿಷಗಳ ನಿರರ್ಗಳ ಭಾಷಣದಲ್ಲಿ ಈ ನಾಡಿನ ಭಾವೀ ರೂವಾರಿಗಳಿಗೆ ಮುಂದಿನ ಭಾರತದ ಚಿತ್ರ ಕಟ್ಟಿಕೊಟ್ಟರು. ನಾನಿಲ್ಲಿ ಕೇವಲ ಎರಡು ಅಂಶಗಳನ್ನು ಮಾತ್ರ ಉಲ್ಲೇಖಿಸುತ್ತೇನೆ.

ಒಂದು ಕಾಲದಲ್ಲಿ ಇಡೀ ಜಗತ್ತಿನಲ್ಲಿ ಜಪಾನಿನ ವಸ್ತುಗಳಿಗೆ ಮಾರುಕಟ್ಟೆ ಇತ್ತು. ಮೇಡ್ ಇನ್ ಜಪಾನ್ ಎಂದರೆ ಜನ ಕೊಳ್ಳಲು ಮುಗಿಬೀಳುತ್ತಿದ್ದರು. ಇಂದು ನಮ್ಮ ಪ್ರಯತ್ನದಿಂದ ಮೇಡ್ ಇನ್ ಇಂಡಿಯಾ ಎಂಬ ಗೀಳು ಹುಟ್ಟಿಸಬಾರದೇಕೆ ? ನಮ್ಮ ಭಾರತ ಆ ಮಟ್ಟಕ್ಕೆ ಏರುವಂತೆ ಮಾಡುವುದೇ ನಮ್ಮ ಬಾಳಿನ ಗುರಿ ಆಗಬೇಕಲ್ಲವೇ?

ಇಂದು ನಮ್ಮಲ್ಲಿ ಹೆಚ್ಚು ಹೆಚ್ಚು ಕಾಲೇಜುಗಳನ್ನು ತೆರೆದು ಪದವೀಧರರನ್ನು ಸೃಷ್ಟಿಸುತ್ತಿದ್ದೇವೆ. ಆದರೆ ಉತ್ತಮ ಶಿಕ್ಷಕರನ್ನು ತಯಾರಿಸುವ ಪ್ರಯತ್ನ ಮಾತ್ರ ಶೂನ್ಯ. ಉತ್ತಮ ಶಿಕ್ಷಕರಿಗೆ ಅಪಾರ ಬೇಡಿಕೆ ಇದೆ. ನಮ್ಮಿಂದ ಇಂಜನೀಯರ್, ಡಾಕ್ಟರ್, ಉದ್ಯಮಿಗಳು ಹೊರದೇಶಕ್ಕೆ ಹೋದರೆ ನಮಗೆ ಕೇವಲ ಡಾಲರ್ ಬರುತ್ತದೆ, ಆದರೆ ಒಬ್ಬ ಶಿಕ್ಷಕನನ್ನು ರಫ್ತು (Export) ಮಾಡಿದರೆ ಅವನು ಇಡೀ ಒಂದು ತಲೆಮಾರಿನ ಮೇಲೆ ತನ್ನ ಪ್ರಭಾವ ಬೀರುತ್ತಾನೆ. ಅದಕ್ಕಾಗಿ ನಾನು ಗುಜರಾತ್‌ನಲ್ಲಿ 5 ವರ್ಷದ ಟೀಚರ್ಸ್ ಟ್ರೈನಿಂಗ್ ಕೋರ್ಸ್ ಪ್ರಾರಂಭಿಸಿದ್ದೇನೆ.

ಈ ದೇಶದ ತರುಣ ಶಕ್ತಿ ಕೇವಲ 'ನ್ಯೂ ಏಜ್ ವೋಟರ್' ಅಲ್ಲ ಬದಲಿಗೆ 'ನ್ಯೂ ಏಜ್ ಪವರ್' ನಾವು ಬದಲಾವಣೆಯ ಹರಿಕಾರರಾಗೋಣ ಎಂಬ ಕರೆ ನೀಡಿದರು. ಅವರ ಭಾಷಣವನ್ನು ಟಿವಿಯಲ್ಲಿ ಕೇಳಿದ ಕೋಟಿ ಕೋಟಿ ತರುಣ ಹೃದಯಗಳಲ್ಲಿ ಭಾರತದ ಉಜ್ವಲ ಭವಿಷ್ಯದ ಬಗ್ಗೆ ಭರವಸೆ ಮೂಡಿಸಿದರು.

ಇದಲ್ಲವೇ ನೈಜ ನಾಯಕನ ವ್ಯಕ್ತಿತ್ವ ? ■

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

FEBRUARY 2013
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.